(MR. SPEAKER)

Preamble stand part of the Bill."

The motion was adopted.

Motion to pass.

Sri M. V. KRISHNAPPA.—I beg to move:

> "That the Mysore Stamp (Amendment) Bill, 1962, as amended, be passed."

Mr. SPEAKER.—The question is:

> "That the Mysore Stamp (Amendment) Bill, 1962, as amended, be passed."

The motion was adopted.

Member's Representation.

Sri C. J. MUCKANNAPPA.—Sir, still my doubt is not cleared and I am not clear in my mind about that point I have raised; I want a clarification at your hands.

Mr. SPEAKER.—The hon. Member is not raising the point, he simply wants some kind of study by me; I will do it at the appropriate time.

Sri C. J. MUCKANNAPPA.—I only wanted to know at the hands of the Hon'ble Chair, whether the Deputy Speaker can exercise his vote whenever a matter as this arises.

Mr. SPEAKER.—I do not want to be in the same position as the hon. Member is. I have not applied my mind. I will tell him at the appropriate time after looking into it.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಅಧ್ಯಕ್ಷರೇ ಈಗ ತಾನೆ ಶ್ರೀಮಾನ್ ಮುಕ್ಕಣ್ಣಪ್ಪನವರು ಸಭೆಯ ಮುಂದೆ ಮಂಡಿಸಿರತಕ್ಕ ವಿಚಾರದಲ್ಲಿ ನಾನೊಂದು ಅರಿಕೆಯನ್ನು ತಮ್ಮ ಮುಂದಿಡಬೇಕಾಗಿದೆ. ಅದ ಕಾರಣ ಅಧ್ಯಕ್ಷರು ಈ ವಿಚಾರದಲ್ಲಿ ಒಂದು ರೂಲಿಂಗ್ ಕೊಡುವುದಕ್ಕೆ ಮುನ್ನ ನನಗೆರಡು ಮಾತನಾಡಲು ಒಂದು ಅವಕಾಶ ಕಲ್ಪಿಸಿಕೊಡಲು ಅವಕಾಶವಿದೆಯೆ?

Mr. SPEAKER.—Yes.

MYSORE SALES-TAX (SECOND AMENDMENT) BILL, 1962.

Motion to consider.

Sri B. D. JATTI (Minister for Finance).—Sir, I beg to move:

> "That the Mysore Sales-Tax (Second Amendment) Bill, 1962, be taken into consideration".

Mr. SPEAKER.—Motion moved:

> "That the Mysore Sales-Tax (Second Amendment) Bill, 1962, be taken into consideration".

Sri B. R. SUNTHANKAR (Belgaum City).—Sir, I rise to a point of order. Sir, the Bill proposes to levy sales-tax on a number of essential commodities. According to the Act of Parliament, assent of the President is necessary whenever any State Legislature imposes or levies any tax on sales on essential commodities. I will read the relevant section of the Essential Goods (Declaration and Regulation of tax on sale or purchase) Act, 1952. I refer to Section 3:

> "Regulation of tax on sale or purchase of essential goods: No law made after the commencement of this Act by the Legislature of a State imposing or authorising imposition of tax on the sale or purchase of any goods declared by this Act to be essential for the life of the community shall have effect unless it has been reserved for the consideration of the President and has received his assent".

The Schedule is also given in the Act. It includes, cereals, pulses in all forms, including bread and floor including atta, maida, soji and bran, etc.—Fresh and dry fruits, sugar-cane, cocoanut, vegetables, edible tubers, vegetable and seeds, bulbs and plants excluding archids etc.—Similarly, cloth woven on handlooms or woven on powerlooms, etc.

So, Sir, I submit that this House cannot take this Bill for consideration unless the previous consent or the assent of the President is obtained. Whether we can take this Bill for consideration in this House is the point of order.

Mr. SPEAKER.—Has the member studied the question or is it a *prima* point *facie* that he is raising? It goes to the root of the matter and validity. Therefore, if he has any more to say by citation of authority, I would like to know.

Sri B. R. SUNTHANKAR.—I only refer to that section, Sir.

Sri G. V. GOWDA.—Sir, I have one more point to what my friend stated. Yesterday or the day before, you were pleased to make some observations to the effect that, if anything that is sought to be introduced is outside the principle of that taxation measure, it is not desirable to have such things being introduced in the amending bill. So many new commodities are sought to be included in this amending Bill and taxes are to be levied. As my friend pointed out, foodgrains, paddy, rice, etc., have been included. There is no principle considered by this House to impose tax on these commodities in the original Act. In the absence of such a thing, is it within our competence now to introduce these commodi, ties in the amended Bill? Therefore I submit, that this is not in accordance with the principle with which the amending bill ought to be.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ವಾಮಿ, ಶ್ರೀಮಾನ್ ವೆಂಕಟೇಗೌಡರು ಎತ್ತಿರುವ...........

Mr. SPEAKER.—It is Sri Sunthankar that has raised the point of order. Or has Sri Venkatai Gowda raised a fresh, point?

Sri G. V. GOWDA.—While supporting the point raised by Sri Suntankar, in addition to that point, I am posing this principle also, namely, since the principle is not accepted by this House in the original Act, an amending bill like this cannot be cansidered now seeking imposition of taxes on these goods.

Mr. SPEAKER.—The House will now rise for lunch and meet after half-an-hour.

The House adjourned for recess at Three of the Clock and re-assembled at Thirty-five Minutes past Three of the Clock.

[MR. SPEAKER in the Chair].

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ಈಗತಾನೆ ನಮ್ಮ ಮಾನ್ಯ ಮಿತ್ರರಾದ ಶ್ರೀಮಾನ್ ಸುಂಠನಕರ್ ಅವರು ಮತ್ತು ವೆಂಕಟೇಗೌಡರು ಮೈಸೂರು ಮಾರಾಟ ತೆರಿಗೆ ವಿಧಿಯಲ್ಲಿ ಅಡಕವಾಗಿರತಕ್ಕ ಕೆಲವು ಅಂಶಗಳ ಬಗ್ಗೆ ಹೇಳಿದ್ದಾರೆ. ಇದರಲ್ಲಿ ಸೇರಿಸಿರತಕ್ಕ ಕೆಲವು ಪದಾರ್ಥಗಳು, ಮನುಷ್ಯನಿಗೆ ಅತ್ಯಗತ್ಯವಾದ ವಸ್ತುಗಳ ಮೇಲೆ ತೆರಿಗೆ ಹಾಕಿರುವುದೇನಿದೆ ಅದು ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ನ್ಯಾಯಬಾಹಿರ ಎಂಬುದಾಗಿ 1952ನೇ ಆಕ್ಟ್‌ನಲ್ಲಿ ಇದೆ. I am referring to the Essential Commodities Act of 1952, Sir.

> "No law made by any Legislature.........sale or purchase of any such goods which have been declared by Parliament by Law essential for the life of the community, unless it has been reserved for the consideration of the President and has received the assent."

Mr. SPEAKER.—When has it to become operative? Is it after it is passed by this House or before?

Sri S. SIVAPPA.—Before it is passed, Sir.

Mr. SPEAKER.—Supposing this Assembly throws it out?

Sri S. SIVAPPA.—That is according to you, Sir. The very purpose of including that clause in the Essential Commodities Act is that the Government should not make hasty legislation in respect of goods which are essential for the community.

Mr. SPEAKER.—What is it that the member wants the Government to do? Does he ask the Government to go to the President to secure assent to an Act which is not passed here? Does he seriously suggest that I should prevent the introduction, discussion or consideration of the Bill or is it open to the House to throw it out as having been brought hastily? I cannot throw it out on the ground that the President's assent has not been secured to a Bill which has not been enacted at all.

Mr. SPEAKER.—Has Sri Sunthankar looked into it?

Sri B. R. SUNTHANKAR.—The Chair may give its ruling, Sir.

Mr. SPEAKER.—Whether he says that or not, I am entitled to give the ruling. Because I have been seeing that Members repeatedly throwing out conundrums at me. That should not happen. Which is the Act which the member has in mind ?

Sri B. R. SUNTHANKAR.—The Essential Commodities Act, 1952, Sir.

Mr. SPEAKER.—Is it Act 52 of 1952 ?

Sri B. R. SUNTHANKAR.—Yes.

Mr. SPEAKER.—Does he see that it is repealed ? I pass on a copy of the Repealing Act to the Hon'ble Member. Hon'ble Members are expected to be up-to date and not rely upon Acts which have been repealed. The Hon'ble Member will kindly see and tell me whether he still sustains his position. I am doing this because I want the Hon'ble Members to study and offer observations.

Sri S. SIVAPPA.—We study, Sir. Because this Government passes Acts hastily—I have got no belief in some of these Acts which have been passed by a brute majority of the Congress Government.

Mr. SPEAKER.—I do not know what principle of democracy is involved.

Sri B. R. SUNTHANKAR.—Yes, Sir. This Act of 1952—Act 52 of 1952 has been repealed. So I withdraw my observations.

Mr. SPEAKER.—Then Sri G. V. Gowda raised a point and he is not here.

I have to mention one thing. I think it was yesterday that a point was raised whether the Hon'ble Minister Sri M. V. Krishnappa could participate in the voice-vote. I ruled on that point and said that those that are not elected, Members cannot vote. That is only with regard to the Hon'ble Minister who is neither a nominated member nor an elected member of this House. I have corrected and said that nominated members of this House are also entitled to vote. All those who are not regular members of this House, either elected or nominated, cannot participate in the voting. That is the position. What I said yesterday was wrong to that extent and I confess I have been in error.

Then the point raised by Sri G. V. Gowda. He is not here and probably he was not serious when he raised the point.

Sri S. M. KRISHNA.—The point raised by him may be disposed of by the Chair by means of a ruling.

Mr. SPEAKER.—It is entirely wrong for any member to raise a point and then go away. He should remain and sit here to see how his point fares. Not that I blame the particular member. Probably he was busy elsewhere.

I could not reasonably follow the point raised by Sri G. V. Gowda, though I understood him thus: namely, that the principles found in the parent Act had been debated upon and therefore it has the sanction of the House. Therefore when the question of amending that Act is debated, that principle cannot be raised in the House. The amending Bill can only be about reduction or alteration or increase. That is what he mentioned. He seems to infer from it that because there is no tax in the Act relating to some of the items here and they are brought for the first time, the scope of the debate will not be controlled by my ruling. I entirely agree with him. I only said that the principles which ware covered by previous debate could be shut out by being brought in the amending Bill. But if it is a question of a particular kind of tax, nature of tax, that has already been considered by the House and a decision taken, that does not come in for direct opposition. They may oppose the alteration ; they may say 'as it stands, so it should continue'. But to the extent of saying that it should be repealed, the scope of debate is not permitted.

Sri G. V. Gowda then said quickly that some consent was necessary. I could not comprehend him ; what exactly was the consent he was having in mind. He linked himself with Sri Sunthankar and said " I agree with what he said ". Now that Sri Sunthankar has already withdrawn—in fact, there is no merit in what he said—I do not know what he

would have said, probably he would have said the same thing. But if Sri G. V. Gowda insisted and said that the consent of the President was a condition-precedent for the Bill being brought to the House and debated upon, I do not agree with him.

As for the point raised by the Leader of the Opposition I have already dealt with it, namely, that if it is a question of reserving it as a condition before it comes into operation, the stage has not been reached yet. In view of what I have said, I do not think there is any merit in any of the points raised for saying that the Bill cannot be considered.

The debate will now proceed. The Hon'ble Minister will say what he has in support of the Bill.

ಶ್ರೀ ಎಸ್. ಶಿವಪ್ಪ.—ಈಗ ಆರ್ಥಿಕ ಮಂತ್ರಿಗಳು ಈ ಮಸೂದೆಯನ್ನು ಮಂಡಿಸುತ್ತಿರುವಾಗ ಅವರಿಗೆ ಒಂದು ಪ್ರಶ್ನೆ ಹಾಕುತ್ತಿದ್ದೇನೆ. ಮೂಲ ಮಸೂದೆಯಲ್ಲಿ ತೆರಿಗೆಯಿಲ್ಲದಿರುವ ಅತಿ ಆವಶ್ಯಕವಾದ ವಸ್ತುಗಳ ಮೇಲೆ ತೆರಿಗೆ ವಿಧಿಸಲು ಯಾವ ಆಧಾರದ ಮೇಲೆ ಅದನ್ನು ಈ ಬಿಲ್ಲಿನಲ್ಲಿ ಅಡಕ ಮಾಡಿದ್ದಾರೆಂಬುದನ್ನು ಹೇಳಬೇಕು. ಆತುರ ಆತುರವಾಗಿ ತಂದಿರುವ ಮಸೂದೆಯಲ್ಲಿ ಅತಿ ಆವಶ್ಯಕವಾದ ಅಕ್ಕಿ, ರಾಗಿ ಮುಂತಾದುವುಗಳ ಮೇಲೆ ತೆರಿಗೆ ವಿಧಿಸುವುದಕ್ಕೆ ಸರಿಯಾದ ಸಮಜಾಯಿಷಿಯನ್ನು ಕೊಡಬೇಕು. ಈ ವಿಷಯದ ಬಗ್ಗೆ ಮೊದಲು ಉತ್ತರ ಹೇಳಬೇಕು.

Mr. SPEAKER.—Will the Leader of the Opposition say under what rule he wants to control the debate and prevent the Minister from speaking?

ಶ್ರೀ ಎಸ್. ಶಿವಪ್ಪ.—ಮನುಷ್ಯನು ದಿನಚರಿ ಉಪಯೋಗಿಸುವ ಸಾಮಾನುಗಳ ಮೇಲೆ ತೆರಿಗೆ ಹಾಕಲು ಸರ್ಕಾರಕ್ಕೆ ಯಾವ ಹಕ್ಕಿದೆ? ಈ ಬಗ್ಗೆ ನಾವು ಪ್ರಶ್ನೆ ಮಾಡಬೇಕಾಗಿದೆ.

Mr. SPEAKER.—Is it a moral or a legal rule?

Sri S. SIVAPPA.—It is a moral, and an ethical rule.

Sri B. D. JATTI.—Sir, so far three Bills were introduced in this House and all the three Bills have been passed. The principles on which we wanted to get the bills passed have already been explained twice by me and once by my Hon. colleage, Sri Krishnappa. In view of the third five-year plan, it has become absolutely necessary for us to find more money for implementing the plan successfull. That is the main reason why we are coming to this House with these Bills. Really speaking these taxation measures ought to have been taken up immediately after the budget was passed but due to some difficulty it was not possible for us and we have come at this stage.

†ಶ್ರೀ ಎಸ್. ಶಿವಪ್ಪ.—ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳುವುದಾಗಿ ಸರ್ಕಾರ ಭರವಸೆ ಕೊಡದೆ ಮುಂದುವರಿಯುವುದಾದರೆ ನಾವು ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಬೇಕಾಗುತ್ತದೆ, ಅದಕ್ಕಾಗಿ ಸಭಾಪರಿತ್ಯಾಗ ಮಾಡಬೇಕಾಗುತ್ತದೆ. ದೇಶದಲ್ಲಿ ಎಲ್ಲರಿಗೂ ವಿರೋಧವಾದ ಅಂಶವನ್ನು ಈ ಮಸೂದೆಯಲ್ಲಿ ಅಡಕ ಮಾಡಿರುವುದು ಬಹಳ ಅಪಾಯಕರ. ವಾಪಸು ತೆಗೆದುಕೊಳ್ಳಬೇಕೆಂದು ನಾವು ಹೇಳಿದಾಗಲೆಲ್ಲಾ ಸರ್ಕಾರ ಅದಕ್ಕೆ ಕಿವಿಗೊಡದೆ ತಮ್ಮ ತೆರಿಗೆ ವಿಧಿಸುವ ಮಸೂದೆಗಳನ್ನು ಮುಂದುವರಿಸುತ್ತಿರುವುದರಿಂದ ಈ ಒಂದು ಹಟವಾರಿತನ, ಮನೋಭಾವವನ್ನು ವಿರೋಧಿಸಲು ಸಾಂಕೇತಿಕವಾಗಿ ನಾವು ಸಭಾಪರಿತ್ಯಾಗ ಮಾಡುತ್ತೇವೆ.

(The Members of the Opposition rose).

Mr. SPEAKER.—Will the Hon'ble Members of the Opposition wait for a minute? Let them not be hasty. We are here to legislate seriously.

Sri S. SIVAPPA.—This is the only way by which we can register our protest.

Mr. SPEAKER.—Registration is over. We are now in the post-registration period.

Sri S. SIVAPPA.—How else can we impress upon the people and also the Members of the Opposite Benches? How can we express the strong feelings and resentment of the people and members on this side of the House. The members of the Treasury Benches do not seem to yield at all. They are stubborn and do not relent. They are pre-determined. They are not receptive. In such circumstances there is no use of our shouting here or staying here. They appear to think that this is a domestic issue for the party, because they command a brute majority in the House.

Mr. SPEAKER.—I think the Leader of the Opposition is feeling excessively on the point. Is there any chance of the Bill going to a Select Committee?

Sri B. D. JATTI.—I am saying the same thing. It would have been far better..........

Mr. SPEAKER.—If it is going to a Select Committee; all points of the Opposition can be agitated there. Not that I object to their walking out, they are at liberty to go but let them consider the new position that has emerged.

Sri B. D. JATTI.—The Hon'ble Leader of the Opposition wants to get a reply by force. That is not the correct procedure for him to follow if they have faith in democracy. We have got a majority here and that is why we are the ruling party; otherwise, they will be here and we will be in the Opposition. There is no point in saying that we have a brute majority every-time.

Mr. SPEAKER.—How was that majority obtained? Is it by election (*laughter*).

Sri K. LAKKAPPA.—Not entirely by election. Even because of indirect election, they are in power. There are Ministers who came by the backdoor.

Mr. SPEAKER.—Is the Hon'ble member suggesting that indirect election is not election?

Sri K. LAKKAPPA.—Those who are not entitled to sit here are sitting here.

Mr. SPEAKER.—Order, order.

Sri B. D. JATTI.—I also know the feelings of members on this side and also on the opposite side. There are certain items in this Bill which require reconsideration, thinking and re-thinking. That is why the intention of the Government of Mysore is to send this Bill to the Select Committee. When it is sent to the Select Committee all the points raised by the members can be discussed and whatever is accepted in that Committee will be placed before this House. I think this explanation will statisfy the Hon'ble Leader of the Opposition and he may not walk out.

Mr. SPEAKER.—He will be losing the benefit of hearing so many good thoughts that will be expressed during the course of the debate.

Sri B. D. JATTI.—This Bill is based on the recommendations of the Resources and Economy Committee with certain modifications and variation. We have tried to introduce all the recommendations in the present Bill.

I will try to explain the clause which we have introduced now.

Under section 3 of the present Act, the authorities enumerated there are entitled to function only under the said Act. Now if the Government wants to ask officers enumerated in the Act to exercise their power on the provisions of other enactments, it is not possible under the Act as it stands now. So, this amendment in the form of clause 2 is introduced.

This clause 3 seeks to amend section 4 of the Act. Section 4 of the Act restricts the scope of the tribunal to exercise functions conferred on it by or under the Act. If we want our assesees should go in appeal to the same sales tax tribunal under any other law, then we have to make a provision. We have therefore made a suitable provision.

This clause 4 seeks to amend section 5. Clause 1 of section 5 stipulates that every dealer shall pay for each year tax on his total turnover at the rate of two per cent. But the proviso stipulates that in respect of commodities mentioned therein a rate of one per cent shall be levied. It is proposed to bring in cereals which are not now taxed. Originally there was only a licence fee of Rs. 1.50 for a turnover of Rs. 1,000. Since the High Court has given a ruling in a case that this licence fee is to be treated as tax we have thought of bringing in all the cereals in the amending Bill. It has become necessary to subject the cereals to tax at one per cent multi-point. Similarly it is felt that in respect of articles of gold or silver which are at present taxed at one per cent, we must enhance the rate to 2 per cent at multi-point.

Sub-clause (2) seeks to amend the third and fourth provisos to sub-section (4) of section 5. We do not find these provisions in any of the acts in the neighbouring States. Under the present Act, those who want to sell the goods on consignment basis they have to show or produce certificates when they are entitled to get 50 per cent refund. In order to remove refund business we have proposed that refund

should not be given and that they should be asked to pay as other merchants do in the neighbouring States. Such concessions which are to be found in the present Act are not to be found in the neighbouring States.

That is why we have thought of amending this clause. The 4th proviso provides for deducting 20 per cent of the purchase price paid by a dealer concerned for the unginned cotton ginned by him on which tax is paid by him. Similar provisions do not exist in the Sales Tax laws in the neighbouring States. We want to follow the same procedure.

This clause 5 seeks to omit section 6 of the principal Act. As it is proposed to subject cereals to one per cent tax at multi-point and bring raw silk also under taxation we have suggested this amendment.

In view of the fact that section 6 is proposed to be deleted there is no need to make a provision for composition. It is not necessary to get composition on licence fee.

This clause 7 seeks to amend section 43, by inserting a new sub-section as sub-section (3). Here, the Supreme Court has given its decision sometime back. So whenever a new provision is to be introduced in an amending Bill we have to specifically mention the date that provision comes into force. If we do not mention it will mean that from the financial year or beginning of the year he will have to pay tax. In order to clarify this position this amendment is brought.

This clause 8 seeks to amend the second schedule. This schedule contains commodities on which a single point tax on first sale is levied. The present clause seeks to add a few more in the schedule. I will give the names of 10 or 15 commodities so that the Hon'ble Members might know what are the rates prevailing in other States.

Item 14–Cycles, tandum cycles accessories, etc.		From 4% we proposed to increase to 6%
In Kerala	5% s.p.	
Madras	5% s.p.	
Andhra	3% s.p.	
Maharashtra	6% s.p.	
Item 16–Foamed rubber sheets cushions, pillows matresses and other like articles		From 6% to 10%
In Kerala	7%	
Madras	6%	
Andhra	5% plus 2	
Maharashtra	12%	
Item 23–Aeroplanes, Rail coaches and their spare parts		From 6% it is proposed to increase to 8%
In Kerala	2%	
Madras	2%	
Andhra	2%	
Maharashtra	10%	
Item 24–All kinds of mill yarn (other than cotton yarn and sewing thread)		From 3/4% to 2%
In Kerala	1% s.p.	
Madras	2% s.p.	
Andhra	½% s.p.	
Maharashtra	2% s.p.	
Item 25–Thrown silk		From ¾% to 2%
Item 35–Vanaspathi		From 5% to 6%
Item 36–Cement		From 5% to 6%
Item 45–Timber		From 3% to 6%
Item 48–Chemical fertilisers, bone meal and oilcake		From 1% to 3%
Item 61–All electrical goods		From 4% to 8%
Item 65–Toilet articles		From 5% to 8%
Item 66–Fire works		From 6% to 8%

Similar measures are also there in the enactments of the neighbouring States and I do not want to mention all these. If it is necessary and if the Hon'ble Members want that information, I will mention all the rates.

4-00 P.M.

Certain items are included for being taxed at single point. Those items are :

(SRI B. D. JATTI)

Aerated waters rate of tax		3 percent
Granite stones	,,	3 percent
Mosaic tiles and chips	,,	4 percent
Cement and asbestos sheets		3 percent
Heavy chemicals	,,	3 percent
Chicory	,,	5 percent

Clause 9 of this Bill seeks to amend the Third Schedule to the Principal Act, Sl. No. 47, raw wool is at present subject to single point tax of one percent. It is proposed to raise it to three percent. Sub-clause (ii) of this clause relates to the deleting of Sl. No. 5 of the Third Schedule-chillies. Chillies are subject to single point tax now. It is subject to a single point purchase tax of two percent at the hands of the first purchaser. Now it is desirable to subject chillies to a multiple point sales-tax of two percent. Again sub-clause (iii) of this clause seeks to add two more commodities, raw silk and tamarind seeds. Now tamarind seeds is an export earning article. That is now brought under this amending Bill.

Clause 10 of this Bill seeks to amend the rate of tax on serial number 7 of the Fourth Schedule to the principal Act, namely, cotton yarn. At present, it is subject to a single point sales-tax of three-fourths per cent at the hands of the first seller in the State. It is declared goods and it is governed by section 14 of the Central Sales-tax Act. The State Governments can levy tax on declared goods not exceeding two per cent. That is why we have proposed to tax it at two per cent.

Clause 11 of the Bill—as a result of this amendment, dried vegetables which are exempted from tax will be subject to tax at two per cent at multiple point and restricts the exemption only to fresh vegetables which are sold day to day in the open market. Similarly sub-clause (ii) of this clause seeks delete serial number 29 of the Fifth Schedule, namely, firewood and charcoal. There was some difficulty in collecting tax from the persons who are selling firewood. In the name of domestic consumption, many persons wanted to misuse this exemption, and so it is proposed to bring this item within the scope of the Fifth Schedule of the principal Act. It is proposed to subject them to a multi-point sales-tax of two percent.

Sri G. V. GOWDA.—Does the Hon'ble Minister know that hotel people indulge in selling firewood ?

Sri B. D. JATTI.—They wish to purchase in the name of persons like us without paying tax, because for domestic use, it is exempted from tax, and thus make money. In order to avoid this, this tax is suggested.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಮಂತ್ರಿಗಳು Domestic Consumption ಗೆ ರಿಲೀಫ್ ಇದೆಯೆಂದು ಹೇಳಿದರು. ಮಸಾಣಕ್ಕೆ ಹೆಣ ಹೋದರೆ ಅದನ್ನು ಸುಡಲು ಸೌದೆ ಬೇಕಾಗುತ್ತದೆ. ಅದಕ್ಕೇನೂ ಫೀ ಹಾಕಲಿಲ್ಲವಲ್ಲಾ! ಹೆಣ ಸುಡಬೇಕಾದರೆ ಏನು ಮಾಡುವುದು ?

Sri B. D. JATTI.—The Hon'ble Member can make a suggestion and it will be taken into consideration when we discuss at the Select Committee.

Sub-clause (iii) of clause 11 seeks to introduce a new entry which is not found in the principal Act, *i.e.*, Sl. No. 36. Some representations have been made to the Government to give exemption for goods purchased by the World Health Organisation. They are purchasing certain goods. They are coming to the help of our people, and so t is proposed to give exemption to articles purchased by the World Health Organisation.

Sir, these are the clauses which we have incorporated in the present Bill which is under consideration. I hope that the Hon'ble Members will make valuable suggestions now and also at the Select Committee. They can think of some suggestions and if certain amendments are necessary we can consider after the submission of the report of the Select Committee.

Sri C. J. MUCKANNAPPA.—Under each of the items, the Hon'ble Finance Minister did not say what money it was going to bring. He simply said that they had raised the tax from so much percentage to so much percentage. What is the money we expect on each item after the increase ?

Sri B. D. JATTI.—If the Hon'ble Members approve the Bill as it is, I expect a revenue of one crore and forty lakhs of rupees.

Sri T. N. MADAPPA GOWDA (Nagamangala).—This Bill is to be sent to the Select Committee. Do we debate on this after the report of the Select Committee comes before us?

Mr. SPEAKER.—The principle must be discussed before referring the Bill to a Select Committee. After the report of the Select Committee the Bill is received, we cannot discuss the principles.

Sri B. R. SUNTHANKAR.—I want to know what is the addition.....

Mr. SPEAKER.—Is the Hon'ble member participating in the debate?

Sri B. R. SUNTHANKAR.—I am not participating, Sir. But I want some information. What is the probable income that will be made by this Bill?

Mr. SPEAKER.—He has already stated that it will be to the tune of a crore and forty lakhs.

Sri B. D. JATTI.—I have already given the information, but I will state it again for the information of the Hon'ble Members. It is one crore and forty lakhs if the Bill is passed as it is by the Hon'ble Members.

Mr. SPEAKER.—Sri Sivappa will initiate the debate and Sri Lakkappa follows if he gets a chance. Otherwise he does not.

† **ಶ್ರೀ ಎಸ್. ಶಿವಪ್ಪ.**—ಸಭಾಪತಿಯವರೇ, ಈ ಮಾರಾಟ ತೆರಿಗೆಯ ತಿದ್ದುಪಡಿ ಮಸೂದೆಯು, ತಾವು ತಂದಿರತಕ್ಕ ಮಸೂದೆಗಳ ಪೈಕಿ ನಾಲ್ಕನೆಯ ಮಸೂದೆಯಾಗಿದೆ. ಇದು ಕಾಂಗ್ರೆಸ್ ಸರ್ಕಾರ, ಅದರಲ್ಲೂ ನಿಜಲಿಂಗಪ್ಪನವರ ಸರ್ಕಾರ, ದೇಶಕ್ಕೆ ಕೊಡತಕ್ಕ ನಾಲ್ಕನೆಯ ಬಾಣಪ್ರಸಾದ. ನಾವು ವರಪ್ರಸಾದ ಕೊಡುತ್ತಾರೆಂದು ತಿಳಿದಿದ್ದೆವು. ಅವರು ಬಾಣಗಳ ಪ್ರಸಾದ ಕೊಡುತ್ತಿದ್ದಾರೆ!! ಶ್ರೀಮಾನ್ ಜತ್ತಿಯವರು ಈ ಮಸೂದೆಯನ್ನು ಮಂಡಿಸುವ ಕಾಲದಲ್ಲಿ, ಯಾವ ರೀತಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಮುಂತಾದ ಟ್ಯಾಕ್ಸ್‌ಗಳಿಗೆ ವಾದವನ್ನಿತ್ತರೋ ಅದೇ ವಾದವನ್ನು ಮುಂದುವರಿಸಿದ್ದಾರೆ. ಮೂರನೆಯ ಯೋಜನೆಗೆ ಹಣ ಬೇಕೆಂದು ಇಟ್ಟ ವಾದವನ್ನೇ ಮಾರಾಟ ತೆರಿಗೆಯ ಮಸೂದೆಗೂ ಇಟ್ಟಿದ್ದಾರೆ.

ನಾನಾಗಲೇ, ಆ ತೆರಿಗೆಗಳ ಮೇಲೆ ಮಾತನಾಡುವ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಹೇಳಿದ್ದೇನೆ. ಈಗ ಅವಲ್ಲದೆ, ಹೊಸದಾಗಿ ಒಂದೆರಡು ವಿಷಯಗಳನ್ನು ಸರ್ಕಾರಕ್ಕೆ ಎಚ್ಚರಿಕೆ ಕೊಡುವ ಮುಖಾಂತರ ಹೇಳಬಯಸುತ್ತೇನೆ.

ತಾವು ಈ ದೇಶದಲ್ಲಿ 'ಸುಖೀರಾಜ್ಯ'ವನ್ನು ಸ್ಥಾಪನೆ ಮಾಡುತ್ತೇವೆಂದು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಬಹಳ ಅದ್ಭುತಾಕಾರವಾಗಿ ಪ್ರಚಾರ ಮಾಡಿ 1962ನೆಯ ಇಸವಿ ಚುನಾವಣೆಗಳಲ್ಲಿ ಜಯಗಳಿಸಿದಿರಿ. ತಾವು ಸಮಾಜವಾದದ ಎಡೆಯಲ್ಲಿ ಸುಖೀರಾಜ್ಯ ಸ್ಥಾಪನೆ ಮಾಡುತ್ತೇವೆಂದು ಹೇಳಿದಿರಿ. ಅಂಥವರು ಇಂದು ತಂದಿರತಕ್ಕ ಮಸೂದೆಗಳನ್ನು ನೋಡಿದರೆ, ಸುಖೀರಾಜ್ಯ ಹೋಗಿ 'ಸುಂಕದ ರಾಜ್ಯ' ಬರುವಂತಿದೆ. ಇವು ಒಂದಕ್ಕೊಂದಕ್ಕೆ ಎಷ್ಟೊಂದು ಅಂತರ!! ಅನ್ನದ ಮೇಲೆ ಸುಂಕ! ರೊಟ್ಟಿಯ ಮೇಲೆ ಸುಂಕ! ಒಲೆಗೆ ಹಾಕುವ ಕಟ್ಟಿಗೆಗೆ ಸುಂಕ!! ಸತ್ತ ಹೆಣದ ಮೇಲೆ ಹಾಕುವ ಬಟ್ಟೆಗೆ ಸುಂಕವೇ? ಈ ರೀತಿ ಸುಂಕದ ಸ್ಥಾಪನೆಮಾಡುವ ತಮಗೆ ಸುಖೀರಾಜ್ಯದ ಅಂತಸ್ತೇನು, ಅಡಿಪಾಯವೇನು ಎಂಬುದೇನಾದರೂ ತಿಳಿದಿದೆಯೇ ಎಂಬ ಅನುಮಾನ ಇಂದು ಜನತೆಗೆ ಮೂಡಿದೆ. ಈ ಮಸೂದೆಯಲ್ಲಿ ಅಡಗಿರತಕ್ಕ ಕೆಲವು ಅಂಶಗಳನ್ನು ತಾವು ನೋಡುವುದಾದರೆ ಇದೇನೂ ಒಂದು ತಿದ್ದುಪಡಿ ಮಸೂದೆಯಲ್ಲ. ಇದೊಂದು ಹೊಸ ಮಸೂದೆ! ಬೃಹದಾಕಾರವಾದ ಮಸೂದೆ!! ಸ್ವಲ್ಪವಾದ ಮಸೂದೆಯೆಂದು ತೋರಿಸುವುದಕ್ಕಾಗಿ 'ತಿದ್ದುಪಡಿ ಮಸೂದೆ' ಎಂದು ಒಂದು ಸಣ್ಣ ಶಬ್ದವನ್ನು ಇದಕ್ಕೆ ಹಾಕಿದ್ದೀರಿ ಅಷ್ಟೆ. ಈ ಮಸೂದೆಯಿಂದ $1\frac{1}{2}$ ಕೋಟಿ ರೂಪಾಯಿ ಬರುತ್ತದೆಯಂತೆ!!

ಈ ತಿದ್ದುಪಡಿ ಮಸೂದೆಯ ಮೂಲಕ $1\frac{1}{2}$ ಕೋಟಿ ರೂಪಾಯಿ ಉತ್ಪನ್ನ ಬರುತ್ತದೆಂದು ಯಾವ ಆಧಾರದ ಮೇಲೆ ಹೇಳಿದ್ದೀರಿ ಎಂದು ಕೇಳುತ್ತೇನೆ. ಪ್ರತಿದಿನ ಬೇಕಾಗುವ ಅಕ್ಕಿ, ರಾಗಿ ಮುಂತಾದ ಜೀವನಾವಶ್ಯಕ ಪದಾರ್ಥಗಳ ಮೇಲೆ ತೆರಿಗೆ ವಸೂಲ್ಮಾಡುತ್ತೀರಿ. ಊಟ ಮಾಡಲು ಬೇಕಾದ ಅಕ್ಕಿಯ ಮೇಲೆ ಸುಂಕ ಹಾಕಿದ್ದೀರಿ. ನಮ್ಮ ರಾಜ್ಯದಲ್ಲಿಯ $2\frac{1}{2}$ ಕೋಟಿ ಜನಸಂಖ್ಯೆಗೆ 50ಲಕ್ಷ ಸಂಸಾರಗಳಿವೆ. ಈ 50 ಲಕ್ಷ ವ್ಯವಹಾರಗಳ ಮೇಲೆ ಒಂದು ಪರ್ಸೆಂಟಿನಿಂದ ಲೆಕ್ಕ ಮಾಡಿದರೆ ಅದು ನಾಲ್ಕೈದು ಪರ್ಸೆಂಟು ಬರುತ್ತದೆ. ಹೆಚ್ಚು ಉತ್ಪತ್ತಿ ಬರುವಂಥ ಸಾಮಾನುಗಳನ್ನು ಇದರಲ್ಲಿ ಸೇರಿಸಿದ್ದೀರಿ. ಆದರೆ ಅಂಕಿ ಸಂಖ್ಯೆಗಳ ವಿವರ ಕೊಟ್ಟಿಲ್ಲ. ಈ ಒಂದು ಸುಂಕದಿಂದ ನಿಮಗೆ 5 ಕೋಟಿ ಆದಾಯ ಬರುತ್ತದೆ. ಈಗ ಸುಂಕ ಇರತಕ್ಕಂಥ ಸಾಮಾನುಗಳ ಮೇಲೆ 10ರಿಂದ 25 ಪರ್ಸೆಂಟು ಜಾಸ್ತಿ ಮಾಡಿದ್ದೀರಿ. ಇದಲ್ಲದೆ ಕೆಲವು ಹೊಸ ಸಾಮಾನುಗಳನ್ನು ಸಹ ಈ ಪಟ್ಟಿಯಲ್ಲಿ ಸೇರಿಸಿದ್ದೀರಿ. ಯಾವ ಆಧಾರದ ಮೇಲೆ 140 ಲಕ್ಷ ರೂಪಾಯಿ ಆದಾಯ ಬರುತ್ತದೆಂದು ಹೇಳಿದ್ದೀರಿ? ನಿಮ್ಮ ಹತ್ತಿರ ಕರಾರುವಾಕ್ಕಾಗಿ ಇಷ್ಟೇ ಆದಾಯವೆಂದು ಹೇಳುವುದಕ್ಕೆ ಲೆಕ್ಕವಿಲ್ಲ. ಸೇಲ್ಸ್‌ಟ್ಯಾಕ್ಸ್ ಸರಿಯಾಗಿ ವಸೂಲ್ಮಾಡಿಲ್ಲ, ಕರಾರುವಾಕ್ ಲೆಕ್ಕವಿಲ್ಲ. ಒಂದು ಸರಿಯಾದ ಅಕೌಂಟಿಂಗ್ ಪ್ರೊಸೀಜರ್ ಇಲ್ಲ. ಕೊಟ್ಟ ಹಣ ಸರಿಯಾಗಿ ಲೆಕ್ಕಮಾಡಿ ಇಷ್ಟು ಹಣ ಬಂದಿದೆ ಎಂದು ಹೇಳತಕ್ಕ ಲೆಕ್ಕದ ಪದ್ಧತಿಯಿಲ್ಲ, ಎರಡು ಕೋಟಿ ಹಣ ಕೊಡಿ ಎಂದು ಕೇಳುತ್ತೀರಿ, ಆದರೆ ಹೇಗೆ ಕೊಡೋಣ? ಕೊಟ್ಟ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚುಮಾಡತಕ್ಕಂಥ ವ್ಯವಸ್ಥೆಯಿಲ್ಲ. ಈ ಸಭೆಯಲ್ಲಿ ಕೋಟಿಗಟ್ಟಲೆ ಹಣ ಕೊಡಿ ಕೊಡಿ ಕೊಡಿ ಎಂದು ಕೇಳುತ್ತಿದ್ದೀರಿ, ಹೇಗೆ ಕೊಡೋಣ? ಇದಕ್ಕೆ ಅರ್ಥ ಸಚಿವರು ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಅರ್ಥ ಶಾಸ್ತ್ರಜ್ಞ ನಿಪುಣರು ಒಂದು ಮಾತನ್ನು ಹೇಳುತ್ತಾರೆ. ನೀತಿ ನಿಯಮಗಳಿಗೆ ಅನುಸಾರವಾಗಿ ಸುಂಕ ಹಾಕಬೇಕು. ಯಾವ ನೀತಿ ನಿಯಮಗಳನ್ನೂ ಅನುಸರಿಸದೆ ಲೆಕ್ಕವಿಲ್ಲದೆ ಸುಂಕ ಹಾಕಿದರೆ ಫ್ರಾನ್ಸ್ ದೇಶದಲ್ಲಿ ಫ್ರೆಂಚ್ ಕ್ರಾಂತಿಯಾದ ಹಾಗೆ ಆಗುತ್ತದೆ.

Historians tell us that it was not the size of the expenditures of the French court in the 18th century but the non-public and the non-social character of

(ಶ್ರೀ ಎಸ್. ಶಿವಪ್ಪ)

those expenditures which contributed to the French Revolution. ಈಗ ತಮ್ಮದೂ ಅದೇ ರೀತಿಯಾಗಿದೆ. ನಿಮ್ಮ ಕಾಂಗ್ರೆಸ್ ಸರಕಾರದ ಆಡಳಿತದಲ್ಲಿ ಈ ದರಬಾರು ನಡೆದಿದೆ. ಈ ರೀತಿ ದರಬಾರು ನಡೆಸಿದರೆ ಕ್ರಾಂತಿಯಾಗುವುದರಲ್ಲಿ ಲವಲೇಶವೂ ಸಂದೇಹವಿಲ್ಲ.

If taxes become excessive to the point of depriving the citizen of the personal opportunities to which he believes he is entitled, tax resistance may lead to tax evasion.

ಅರ್ಥಶಾಸ್ತ್ರಪ್ರವೀಣರು ಈರೀತಿ ಹೇಳಿದ್ದಾರೆ. Limit of Taxable capacity ಎಂದು ಈ ಪುಸ್ತಕದ ಹೆಸರು. ಈ ಗ್ರಂಥ ಕರ್ತರ ಹೆಸರು Prince Strong, Tax Institute Inc, America, ಎಂದಿದೆ. ಅರ್ಥಶಾಸ್ತ್ರ ನಿಪುಣರು ಈ ರೀತಿ ಹೇಳಿರುವದರಿಂದ ಸುಂಕ ತೆರಿಗೆ ಹಾಕುವ ನೀತಿಯ ಬಗ್ಗೆ ಹದಗೆಟ್ಟು ಮಾತನಾಡಬಾರದು. ಸುಂಕ ಕೊಡುವ ಶಕ್ತಿ ಜನರಿಗೆ ಎಷ್ಟಿದೆ ಎನ್ನುವುದನ್ನು ಅಳೆದು ಹುಷಾರಾಗಿ ಮಾಡಬೇಕು. ತೆರಿಗೆಯಿಂದ ಹಣ ಬೇಕೆಂದು ಎಲ್ಲ ಬಾಬುಗಳ ಮೇಲೆ ಸುಂಕ ಹಾಕುವುದು ಸರಿಯಲ್ಲ. ಸಮಾಜವಾದೀ ಸಮಾಜ ರಚನೆಯ ತಳಹದಿಯ ಮೇಲೆ ಸುಖೀ ರಾಜ್ಯಮಾಡಬೇಕೆಂದು ನಾವೆಲ್ಲರೂ ಹೇಳುತ್ತೇವೆ. ಮತ್ತು ಅದಕ್ಕಾಗಿ ಬದ್ಧಕಂಕಣರಾಗಿದ್ದೇವೆ. ಆದರೆ ದಿನಚರಿ ಬೇಕಾಗುವಂಥ ವಸ್ತುಗಳ ಮೇಲೆ ಸುಂಕ ಹಾಕುವುದಕ್ಕೆ ಮನಸ್ಸು ಮಾಡಿದ್ದೀರಲ್ಲ. ಇದರಿಂದ ಎಂಥ ಸುಖೀ ರಾಜ್ಯಸ್ಥಾಪನೆಯಾಗುತ್ತದೆ? ಸುಂಕ ತೆರಿಗೆ ಹಾಕಬೇಕಾಗುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಆದರೆ ಅದನ್ನು ಎಷ್ಟರಮಟ್ಟಿಗೆ ಹಾಕಬೇಕು ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಅದರಲ್ಲಿಯೂ ಸರಕಾರದ ಜವಾಬ್ದಾರೀ ಹೊತ್ತವರು ಮೊದಲು ಯೋಚನೆ ಮಾಡಬೇಕಾದುದು ಅಗತ್ಯ. ಇವತ್ತಿನ ದಿವಸ ಜೀವನದ ಖರ್ಚು ವೆಚ್ಚ ವಿಪರೀತವಾಗಿ ಏರುತ್ತಿದೆ. ಸರಿಯಾಗಿ ಎರಡು ಹೊತ್ತು ಊಟ ಮಾಡಲು ಬಡವನಿಗೆ ಶಕ್ತಿಯಿಲ್ಲ. ಅಕ್ಕಿ, ರಾಗಿ, ನವಣೆ, ಬ್ರೆಡ್, ಗೋಧಿ, ಮೆಣಸಿನಕಾಯಿ, ಸೌದೆ, ಮನೆಕಟ್ಟಲು ಬೇಕಾದ ಮರ ಇವುಗಳ ಮೇಲೆ, ಜೀವನಕ್ಕೆ ಅತ್ಯಾವಶ್ಯಕವಾಗಿ ಬೇಕಾದ ಸಮಸ್ತ ವಸ್ತುಗಳ ಮೇಲೆ ಸುಂಕ ಹಾಕುತ್ತಿದ್ದೀರಿ. ಅತ್ಯಾವಶ್ಯಕ ವಸ್ತುಗಳ ಮೇಲೆ ಸುಂಕ ಹಾಕುವಾಗ್ಗೆ ಹುಷಾರಾಗಿ ಮಾಡಬೇಕಾಗುತ್ತದೆ. ಹೆಚ್ಚು ಹೆಚ್ಚಾಗಿ ಸುಂಕ ಹಾಕುವುದಕ್ಕೆ ತಡೆಯುಂಟು ಮಾಡಲು essential commodities ಯಾವವು ಎನ್ನುವುದಕ್ಕೆ ಈ ಶಾಸನ ರಚನೆಯಾಗಿದೆ. ಇವತ್ತಿನ ದಿವಸ ಈ ಎಚ್ಚರಿಕೆಯನ್ನು ಸಾಕಷ್ಟು ಗಮನಕ್ಕೆ ತೆಗೆದುಕೊಳ್ಳದೆ ಮುಂದುವರಿಯುತ್ತಿದ್ದೀರಿ. ಇದರಲ್ಲಿ ನಿಮ್ಮದು ಏನು ಹುಚ್ಚು ಎದೆಗಾರಿಕೆ ಎಂದು ಅನಿಸುತ್ತದೆ. ಈ ರೀತಿ ಹುಚ್ಚು ಧೈರ್ಯದಿಂದ ಮುಂದುವರಿದರೆ ಮುಂದೆ ಬಹಳ ಅಪಾಯಕ್ಕೆ ಎಡೆಯಾದೀತೆಂದು ಎಚ್ಚರಿಕೆ ಕೊಡಬೇಕಾಗುತ್ತದೆ.

ಈ ಮಾರಾಟದ ತೆರಿಗೆಯ ವಿಚಾರದಲ್ಲಿ, ಇದನ್ನು ಸೆಲೆಕ್ಟ್ ಕಮಿಟಿಗೆ ಕಳಿಸುತ್ತೇವೆಂದು ಹೇಳಿದ್ದಾರೆ. ಅಲ್ಲಿ ಅನೇಕ ತಿದ್ದುಪಡಿಗಳನ್ನು ಮಾಡುವುದಕ್ಕೆ ಅವಕಾಶವಿದೆ ಎಂದೂ ಅವರು ಹೇಳಿಬಿಟ್ಟರು. ಆದರೆ ನನಗೆ ಒಂದು ಶಂಕೆ ಇದೆ. ಇದು ಸೆಲೆಕ್ಟ್ ಕಮಿಟಿಗೇ ಹೋಗಲಿ, ಯಾವ ಕಮಿಟಿಗೇ ಹೋಗಲಿ ಅಲ್ಲಿ ತಮ್ಮ ಅಭಿಪ್ರಾಯವೇನಿದೆಯೋ ಅದನ್ನೇ ಪ್ರತಿಪಾದನೆ ಮಾಡತಕ್ಕವರ ಬಹುಜನ ಇರುವುದರಿಂದ ಇದರಲ್ಲಿ ಹೆಚ್ಚಿನ ಬದಲಾವಣೆ ಆಗುವುದಿಲ್ಲವೆನ್ನುವ ಶಂಕೆ ನನಗೆ ಖಂಡಿತವಾಗಿ ಇದೆ. ನಾನು ಮೊದಲೇ ಹೇಳಿದ ಹಾಗೆ ಇವೊತ್ತು ದೇಶದಲ್ಲಿ ಈ ಮಾರಾಟ ತೆರಿಗೆಯ ವಿಚಾರವಾಗಿ ಎಷ್ಟು ಪ್ರತಿಕ್ರಿಯೆಯುಂಟಾಗಿದೆ ಎನ್ನುವುದನ್ನು ನೋಡಬೇಕು. ನನಗೆ ನೂರಾರು ಅಸೋಸಿಯೇಷನ್‌ಗಳಿಂದ ಕಾಗದ ಪತ್ರಗಳು ಬಂದಿವೆ. ಅದೆಲ್ಲವನ್ನೂ ಕೂಡ ಓದುವುದಕ್ಕೆ ಸಾಕಷ್ಟು ಅವಕಾಶ ದೊರೆಯಲಾರದು. ಆದುದರಿಂದ ಅವನ್ನು ಸೆಲೆಕ್ಟ್ ಕಮಿಟಿಗೆ ಕಳಿಸಿಕೊಡುತ್ತೇನೆ.

ಇವೊತ್ತು ದೇಶದಲ್ಲಿ ಕ್ರಾಂತಿಕಾರಕವಾದ ಪ್ರತಿಕ್ರಿಯೆ ಉಂಟಾಗಿದೆ. ಜನಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಸರ್ಕಾರ ಅವಕಾಶ ಕೊಡುತ್ತಿಲ್ಲ, ದಿನಚರಿ ಬಳಕೆ ವಸ್ತುಗಳ ಮೇಲೆ ತೆರಿಗೆಯನ್ನು ಹಾಕಿದ್ದಾರೆ ಎಂದು ನಮ್ಮ ಜನ ಬಹಳ ನೊಂದಿದ್ದಾರೆ. ಇದನ್ನು ಸೆಲೆಕ್ಟ್ ಕಮಿಟಿಗೆ ಕಳಿಸುವುದಕ್ಕೆ ಮಂಚೆ ಅರ್ಥ ಸಚಿವರಿಗೆ ಸಭಾಪತಿಗಳ ಮೂಲಕ ಒಂದು ವಿಷಯವನ್ನು ಹೇಳುತ್ತೇನೆ. ಸೆಲೆಕ್ಟ್ ಕಮಿಟಿಗೆ ಇದನ್ನು ಕಳಿಸಿಕೊಡಬೇಡಿ, ಈ ಮಸೂದೆಗೆ ಇದು ಸಕಾಲವಲ್ಲ. ಈಗಾಗಲೇ ಮೂರು ತೆರಿಗೆ ಮಸೂದೆಗಳನ್ನೂ ಈ ಸಭೆ ಒಪ್ಪುವುದರ ಮುಖಾಂತರ ಎರಡು ಕೋಟಿ ರೂಪಾಯಿಗಳನ್ನು ಸರ್ಕಾರದ ಕೈಗೆ ಕೊಟ್ಟಿದ್ದೇವೆ. ಅದನ್ನು ತೆಗೆದುಕೊಳ್ಳಿ. ಹೋದ ವರ್ಷ ಎರಡು ಕೋಟಿ ರೂಪಾಯಿ ತೆರಿಗೆ ಬರುವಂಥ ಮಸೂದೆಗಳಿಗೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಇದರಿಂದ ವರ್ಷಕ್ಕೆ ನಾಲ್ಕೈದು ಕೋಟಿ ರೂಪಾಯಿ ಬರುತ್ತದೆ. ಐದುವರ್ಷಗಳಲ್ಲಿ 25 ಕೋಟಿ ರೂಪಾಯಿಗಳ ಆದಾಯ ಬರುವ ಮಸೂದೆಗಳನ್ನು ಸರ್ಕಾರದ ಕೈಗೆ ಕೊಟ್ಟಿದ್ದೇವೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲ ಕಾರ್ಯಗಳನ್ನೂ ತೆಗೆದುಕೊಳ್ಳುವುದಕ್ಕೆ ಈ ಹಣದಿಂದ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಈಗ ಸೂಚಿಸಿರುವ ತೆರಿಗೆಗಳನ್ನು ಹಾಕಿ ಮೂರನೆಯ ಯೋಜನೆಯನ್ನು ಕಾರ್ಯ ರೂಪಕ್ಕೆ ಎಷ್ಟು ಯಶಸ್ವಿಯಾಗಿ ತರುತ್ತೀರೋ ಅದಕ್ಕಿಂತಲೂ ಹೆಚ್ಚು ಯಶಸ್ವಿಯಾಗಿ ಜನತೆಯ ಸಹಕಾರದಿಂದ ತರಬಹುದು. ಇವೊತ್ತು ನೂರಾರು ತೆರಿಗೆಗಳನ್ನು ಹಾಕಿದರೂ ಈ ಯೋಜನೆಗಳನ್ನು ಪೂರೈಸುವುದಕ್ಕೆ ನಿಮ್ಮ ಕೈಯಿಂದ ಸಾಧ್ಯವಾಗುವುದಿಲ್ಲ. ಜನರ ಪ್ರೀತಿ ಇಲ್ಲದೆ, ಜನರ ಶಕ್ತಿ ಇಲ್ಲದೆ, ಜನರ ಮಮತೆಯಿಲ್ಲದೆ ಏನೂ ಸಾಧ್ಯವಾಗುವುದಿಲ್ಲ. ಅಮೆರಿಕಾ ದೇಶದಲ್ಲಿ ಚಿನ್ನದ ಗಟ್ಟಿಗಳನ್ನಿಟ್ಟುಕೊಂಡಿದ್ದಾರೆ, ಕೋಟಿಗಟ್ಟಲೆ ಇಟ್ಟುಕೊಂಡಿದ್ದಾರೆ. ಈ ಹಣದ ಆಧಾರದ ಮೇಲೆ ಅವರು ಯೋಜನೆಗಳನ್ನು ಹಾಕುತ್ತಿದ್ದಾರೆ. ನಾವು ಅವರ ಮಾದರಿಯಲ್ಲಿ ಯೋಜನೆಗಳನ್ನು ಮಾಡುತ್ತೇವೆಂದರೆ ಖಂಡಿತವಾಗಿಯೂ ಸಾಧ್ಯವಿಲ್ಲ. ನಮ್ಮ ಹತ್ತಿರ ದುಡ್ಡಿಲ್ಲ, ಉತ್ಪತ್ತಿ ಇಲ್ಲ. ನಮ್ಮಲ್ಲಿರುವುದು ಜನಶಕ್ತಿ. ಜನತೆಯ ಸಹಾಯದಿಂದ ನಾವು ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಜನತೆಯ ಹೊಟ್ಟೆಯಮೇಲೆ ಹೊಡೆಯುತ್ತೇವೆಂದರೆ ಸರ್ಕಾರಕ್ಕೆ ಜನತಾಶಕ್ತಿ ಎಲ್ಲಿಂದ ಬರುತ್ತದೆ? ಆಹಾರ ಪದಾರ್ಥಗಳು, ಮನೆ ಕಟ್ಟಲು ಬೇಕಾದ ಎಲ್ಲ ಸಲಕರಣೆಗಳು, ಇವುಗಳಮೇಲೆ ಸುಂಕ ಹಾಕುತ್ತಿದ್ದೀರಿ, ಮೈಮೇಲೆ ಇರತಕ್ಕ ಬಟ್ಟೆಯ ಮೇಲೆ ಸುಂಕ ಹಾಕುತ್ತಿದ್ದೀರಿ, ಯಾರಿಗೋಸ್ಕರವಾಗಿ ತೆರಿಗೆ ಹಾಕಿ ಯೋಜನೆಗಳನ್ನು ಕೈಕೊಳ್ಳುತ್ತಿದ್ದೀರಿ? ಜನ ಇದ್ದರೆ ತಾನೇ? ಜನ

ಹಸಿದು ಆಹಾರ ವಸ್ತುಗಳನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲದೆ ಹೋದರೆ ಜನಗಳಿಗೆ ಶಕ್ತಿ ಎಲ್ಲಿಂದ ಬರುತ್ತದೆ? ಜನಶಕ್ತಿಯಿಲ್ಲದೆ 100 ಕೋಟಿ ರೂಪಾಯಿ ಅಲ್ಲ, 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಮೂರನೆಯ ಯೋಜನೆಯನ್ನಾಗಲೀ, ಇತರ ದೊಡ್ಡ ದೊಡ್ಡ ಯೋಜನೆಗಳನ್ನಾಗಲೀ ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲ. ಇವೊತ್ತು ಎಲ್ಲ ತೆರಿಗೆಗಳ ಶಕ್ತಿಗಿಂತ ನೀವು ಉಳಿಸಿಕೊಳ್ಳಬೇಕಾದ್ದು ಜನರ ಒಲುಮೆಯ ಶಕ್ತಿ. ಇದಕ್ಕೆ ಬೆಲೆಯಿಲ್ಲ. ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೂ ಜನಗಳ ಒಲುಮೆ, ಪ್ರೀತಿ, ಮಮತೆ ಇರಬೇಕು ; ಜನಗಳ ಶಕ್ತಿ ಇರಬೇಕು. ಇದನ್ನು ಗಳಿಸಿಕೊಂಡಹೊರತು ಎಷ್ಟು ತೆರಿಗೆ ಮಸೂದೆಗಳನ್ನು ತಂದರೂ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಜನರ ಪ್ರೀತಿ, ಮಮತೆ, ಒಲುಮೆ ಮತ್ತು ಶಕ್ತಿಗಳನ್ನು ಗಳಿಸಿಕೊಳ್ಳಿ. ನಿಮ್ಮ ಕಾರುಬಾರು, ದರಬಾರು ಇವನ್ನು ಕಡಮೆ ಮಾಡಿ. ರಾಜ ಮಹಾರಾಜರು ನಡೆಸಿದಂತೆ ದರಬಾರು ನಡೆಸುತ್ತಿದ್ದೀರಿ ಎನ್ನುವ ಮಾತು ದೇಶದ ಎಲ್ಲ ಮೂಲೆಗಳಿಂದಲೂ ಕೇಳಿಬರುತ್ತಿದೆ. ಕೇವಲ ಸಮಾಜವಾದ ಅಥವಾ ಸುಖೀರಾಜ್ಯವೆನ್ನುವ ಶಬ್ದಗಳನ್ನೂ ಅಗ್ಗವಾಗಿ ಉಪಯೋಗಿಸುತ್ತೀರಿ. ನಿಜವಾಗಿಯೂ ಸಮಾಜವಾದ ಅಥವಾ ಸುಖೀರಾಜ್ಯದ ಮೇಲೆ ಆಸೆ ಇದ್ದ ಪಕ್ಷದಲ್ಲಿ ಜನಗಳ ಶಕ್ತಿ, ಒಲುಮೆ, ಮಮತೆ, ಪ್ರೀತಿ ಬೇಕು ಎನ್ನುವ ಆಸೆ ಇದ್ದ ಪಕ್ಷದಲ್ಲಿ ಈ ಮಸೂದೆಯನ್ನು ಮಾನ್ಯ ಆರ್ಥಿಕ ಸಚಿವರು ಈಗಲಾದರೂ ವಾಪಸು ಪಡೆಯಬೇಕೆಂದು ಬಹಳ ತೀವ್ರತೆಯಿಂದ ಮನವಿಯನ್ನು ಮಾಡುತ್ತಿದ್ದೇನೆ.

†ಶ್ರೀ ಕೆ. ಪಿ. ಗದಗ್ (ಗದಗ್).—ಅಧ್ಯಕ್ಷರೇ, ಇವೊತ್ತಿನ ದಿವಸ ನಮ್ಮ ಮುಂದೆ ಇರುವ Sales Tax Amendment Bill ವಿಷಯದಲ್ಲಿ ನನಗೆ ತಿಳಿದಮಟ್ಟಿಗೆ ಕೆಲವು ಸಲಹೆಗಳನ್ನು ಮಾಡಬಯಸುತ್ತೇನೆ. ಈಗ ನಾನು ಈ ಬಿಲ್ಲಿನಲ್ಲಿರುವುದನ್ನಷ್ಟೇ ಮಾತನಾಡುತ್ತೇನೆಯೇ ಹೊರತು ಇಲ್ಲಿ ಒಂದಿಲ್ಲೊಂದು ಕಾರಣದಿಂದ ಕೆಲವು ಟೀಕೆಗಳ ಮೇಲೆ ಟೀಕೆಗಳು ಪಕ್ಷ ಅಥವಾ ರಾಜಕಾರಣದಿಂದ ಏನು ನಡೆದುವೋ ಆ ಮಾತುಗಳಿಗೆ ನಾನು ಅಷ್ಟೊಂದು ಮಹತ್ವವನ್ನು ಕೊಡುವುದಿಲ್ಲ. ಆ ಮಾತಿಗೆ ಉತ್ತರವನ್ನು ಕೊಡುವುದು ಅಷ್ಟು ಸರಿಕಾಣುವುದಿಲ್ಲ. ಅದು ವಿನಾ ಕಾರಣ ಜನತೆಯಲ್ಲಿ ಇಲ್ಲದ ಅಪಪ್ರಚಾರವನ್ನು ಮಾಡುವ ಉದ್ದೇಶದಿಂದ ಅಥವಾ ಜನತೆಗೆ ಒಂದು ಪ್ರೀತಿ, ತಮ್ಮ ಪಕ್ಷದ ಬಗ್ಗೆ ಜನರ ಮನಸ್ಸು ಒಲಿಸುವಂಥ ಭಾವನೆ (sentiment) ಯಿಂದ ಮಾತನಾಡುವ ವಿಷಯವಾಗಿರುವುದರಿಂದ ಅದಕ್ಕೆ ನಾನು ಅಷ್ಟು ಗಮನ ಕೊಡುವುದಿಲ್ಲ. ಬಿಲ್ಲಿನ ವಿಷಯ ಮಾತ್ರ ಮಾತನಾಡುತ್ತೇನೆ. ಆದರೆ ಒಂದು ಸಂಗತಿಯನ್ನು ಈ ಮೂಲಕ ಹೇಳಬಯಸುತ್ತೇನೆ.

ಅನೇಕ ಮಹನೀಯರು ಇಂಥ ಒಂದು ಪಂಚವಾರ್ಷಿಕ ಯೋಜನೆಗೆ ಎಷ್ಟು ಹಣ ನಮಗೆ ಬೇಕಾಗುತ್ತದೆ, ಇಂಥಿಂಥ ಕೆಲಸಗಳಿವೆ ಎಂದು ತಿಳಿದಿದ್ದರೂ, ಈಗಾಗಲೇ ಪಾಸ್ ಆದಂಥ ಮೂರು ಬಿಲ್‌ಗಳ ವಿಚಾರದಲ್ಲಿ ಏನು ಹೇಳಿದರೋ ಅದನ್ನೇ ಈ ಬಿಲ್ ವಿಷಯದಲ್ಲಿಯೂ ಹೇಳಿದ್ದಾರೆ. ಪಾಂಚವಾರ್ಷಿಕ ಯೋಜನೆಗಳಿಗೆ ನಮಗೆ ಹಣದ ಆವಶ್ಯಕತೆ ಇದೆ ಎನ್ನುವುದು ಸಾಕಷ್ಟು ಮನವರಿಕೆಯಾಗಿಲ್ಲವೆನ್ನುವ ಕಾರಣದಿಂದ ಈ ರೀತಿಯಾಗಿದೆ. ಆದಾಗ್ಯೂ ಏನೋ ಒಂದು ಪ್ರಶ್ನೆ ಮಾಡುತ್ತಾರೆ. ಪುನಃ ಪುನಃ ತಿಳಿದೂ ಪ್ರಶ್ನೆ ಮಾಡುತ್ತಾರೆಂಥಹೆ ಹೇಗೆ? ಇದಕ್ಕೆ ಏಕೆ ಅಷ್ಟು ಮಹತ್ವವನ್ನು ಕೊಡಬೇಕು? ಅದನ್ನು ಅಷ್ಟಾಗಿ ಹೇಳುವ ಗೊಡವೆಗೆ ಹೋಗುವುದು ಉಚಿತ ಕಾಣುವುದಿಲ್ಲ, ಅದರ ಆವಶ್ಯಕತೆ ಕಾಣುವುದಿಲ್ಲ. ಆದುದರಿಂದ ಬಿಲ್ ಬಗ್ಗೆ ಏನಿದೆ ಎಂದು ನನ್ನ ವಿಚಾರಗಳನ್ನು ಸ್ವಲ್ಪ ಹೇಳಬಯಸುತ್ತೇನೆ.

ಈ ಬಿಲ್‌ನಲ್ಲಿ ಕೆಲವು ಅಂಶಗಳೇನಿವೆ, ಅವು ಇದಕ್ಕೆ ಹಿಂದೆ ಏನಿತ್ತು, ಅದರ ಪರಿಣಾಮವೇನಾಗುವುದು ಎಂಬುದನ್ನು ಕೆಲಮಟ್ಟಿಗೆ ನಾನು ಈಗ ಮಾನ್ಯ ಸಭೆಯ ಮುಂದೆ ತರಬಯಸುತ್ತೇನೆ.

ಎರಡನೆಯ ಸಬ್-ಕ್ಲಾಜ್‌ನಲ್ಲಿ "It shall be deemed to have come into force on the first day of April 1962" ಎಂದು ಏನಿದೆ ಇದು ನನಗೆ ಸರಿಕಾಣುವುದಿಲ್ಲ. ಇದು ಆಗತಕ್ಕದ್ದಲ್ಲ. Retrospective effect ನಿಂದ ಎಂದು ಏನಿದೆ ಅದು ಅನೇಕ ಕಾರಣಗಳ ಮೂಲಕ ಸರಿಯಾಗಿಲ್ಲ. ಈ ಬಿಲ್‌ನಲ್ಲಿ ಕೆಲವು exemption ಇರುವ ಐಟಂಗಳೇನಿವೆ ಅವಕ್ಕೂ tax ಮಾಡಲಾಗಿರುತ್ತದೆ. ಕೆಲವು taxes ಹೆಚ್ಚಿಸಿದ್ದಾರೆ. ಮತ್ತು ಅನೇಕ ಕಾರಣಗಳ ಮೂಲಕ ಕೆಲವು ಸವಲತ್ತುಗಳನ್ನು ಏನು ಕೊಟ್ಟಿದ್ದರು ಅವನ್ನೆಲ್ಲ withdraw ಮಾಡಿದ್ದರಿಂದ ಮತ್ತು ಹಿಂದಿನಿಂದ ಜಾರಿಗೆ ಕೊಡುತ್ತೇವೆ ಎಂದು ಏನು ಹೇಳುತ್ತಾರೆ ಅದರಿಂದ ಯಾರು ವ್ಯಾಪಾರ ಮಾಡಿದ್ದಾರೆಯೋ ಅವರ ಕೈಯಿಂದ ತೆರಿಗೆ ಬೀಳುತ್ತದೆ. ಅವರು ಹೀಗೆ ಲುಕ್ಸಾನು ಮಾಡಿಕೊಂಡು ಕೊಡುವಂಥಾದ್ದು ಸರಿಯಾದುದಲ್ಲ, ಈ ನಿಲುವು ಸರಿಯಲ್ಲ, ಇದು ಸರಿಯಾಗಲಿಕ್ಕಿಲ್ಲ, ಇದಾಗಬಾರದು ಎಂದು ನನ್ನ ಸಲಹೆ ಇದೆ.

4-30 P.M.

Amendment to Section (5) ನಲ್ಲಿರುವ food grains ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಮಾನ್ ವೆಂಕಟೇಗೌಡರು ಹೇಳಿದರು. ಈ ತರಹ New Articles ಗಳ ಮೇಲೆ ಹಾಕುವುದು ಟ್ಯಾಕ್ಸೇಷನ್ ಆಗುತ್ತದೆ, ಅದಕ್ಕೆ ಇದು ಸರಿಯಾದುದಲ್ಲ ಎಂದು ಹೇಳಿದರು. ನಾನೂ ಮೊದಲು ಇದನ್ನು ಒಪ್ಪಿಕೊಂಡಿರಲಿಲ್ಲ. ಆದರೆ ಈಗ ಮಾನ್ಯ ಅರ್ಥ ಸಚಿವರು ಹೇಳಿದ ಹಾಗೆ, ಇದು ಲೈಸನ್ಸು ಫೀ ಎಂದಾಗುತ್ತದೆ. ಮಾಲುಗಳನ್ನು ತಂದು ಮಾರುವಾಗ ಇದು ಬೀಳುತ್ತದೆ ಎಂದು ಆಕ್ಟಿನೊಳಗೂ ಇದೆ. ಇದು ಲೈಸನ್ಸ್ ಫೀಜು, ಟ್ಯಾಕ್ಸೇಷನ್ನು ಅಲ್ಲ ಎಂದು Original Act ನಲ್ಲಿಯೂ ಇದೆ. ಇದರ ಪ್ರಕಾರ ಹೈಕೋರ್ಟು ಆರ್ಡರು ಕೂಡ ಆಗಿದೆ. ಇದು ಹೊಸದೇನೂ ಅಲ್ಲ. ಆದರೆ ಈಗ multi-point ಆಗುತ್ತದೆ. ಮಲ್ಟೀಪಾಯಿಂಟು ಎಂದು ಮಾಡುವುದರಲ್ಲಿ ಸರಕಾರದ ಒಂದು ಉದ್ದೇಶ ಕನ್‌ಸ್ಯೂಮರುಗಳ ಮೇಲೆಯೂ ಸಹ incidence of taxation ಹೆಚ್ಚಾಗುತ್ತದೆ ಎನ್ನುವುದು ನಿಜ. ಆದರೆ ಕೆಲವರು ಇದನ್ನು ಬಿಟ್ಟುಬಿಡಿ ಎಂದರು. Food grains ಎನ್ನುವುದು ಸಾಮಾನ್ಯ ಜನರಿಗೆ ಪ್ರತಿದಿವಸವೂ ಬೇಕಾಗುತ್ತದೆ. ಇದರಿಂದ ಆ ಜನಕ್ಕೆ ಕಷ್ಟ ಹೆಚ್ಚಾಗುತ್ತದೆ. ಅದಕ್ಕಾಗಿ ಇದನ್ನು ಹಾಕಬಾರದು ಎನ್ನುವಂತೆ ಕೆಲವರು ಪ್ರತಿಪಾದನೆ ಮಾಡಿದ್ದಾರೆ. ಇದನ್ನೂ ಗಮನಕ್ಕೆ ತೆಗೆದುಕೊಳ್ಳಬೇಕು. ಮಲ್ಟೀಪಾಯಿಂಟು ಎಂದು ಮಾಡುವುದಕ್ಕೆ ಸರಕಾರದ ಉದ್ದೇಶ ಇದರಿಂದ Evasion ಆಗುವುದಿಲ್ಲ ಎನ್ನುವುದು. ಈಗ ಕೆಲವು ಆರ್ಟಿಕಲ್ಸುಗಳಲ್ಲಿ

(ಶ್ರೀ ಕೆ. ಪಿ. ಗದಗ್)

Evasion ಆಗುವ ಸಂಭವವಿದೆ. ಆ ಕಾರಣದಿಂದ ಮಲ್ಟಿಪಾಯಿಂಟು ಎಂದು ಹಾಕುವುದು ಅಷ್ಟು ಸರಿ ಕಾಣಿಸುವುದಿಲ್ಲ. ಟ್ಯಾಕ್ಸೇಷನ್ನನ್ನು ಸುಲಭವಾದ ರೀತಿಯಲ್ಲಿ ಹಾಕಬೇಕು. ಮಲ್ಟೀಪಾಯಿಂಟು ಎಂದು ಸಾಮಾನ್ಯ ಜನರ ಮೇಲೆ ಹಾಕಿದರೆ ಅದರಿಂದ incidence of taxation ಜಾಸ್ತಿಯಾಗುವುದರಿಂದ ಈ ಮಲ್ಟೀಪಾಯಿಂಟ್ ಎಂದು ಮಾಡುವುದು ಸರಿಯಲ್ಲ ಎಂದು ನನ್ನ ಸಲಹೆ.

ಮತ್ತೊಂದು ನಾನು ಹೇಳುವುದು food grains ಮೇಲೆ ಎಂದು ಏನು ಹಾಕಿದ್ದಾರೆ. ಅದು ನಮ್ಮ ನೆರೆ ಹೊರೆಯ ಪ್ರಾಂತಗಳವರೂ food grains ಮೇಲೆ ಏನಾದರೂ ಟ್ಯಾಕ್ಸು ಹಾಕಿದ್ದಾರೆಯೇ ಎನ್ನುವುದನ್ನೂ ನೋಡಿ ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಅವರು ಹಾಕದಿದ್ದರೆ ನಾವೇಕೆ ಹಾಕಬೇಕು ಎನ್ನುವುದನ್ನು ವಿಚಾರ ಮಾಡಬೇಕು. ಟ್ಯಾಕ್ಸೇಷನ್ನಿನಿಂದ ಉತ್ಪನ್ನ ಹೆಚ್ಚಿಗೆ ಬರುತ್ತದೆ ಎಂದು ಮಾಡುವಾಗ ಮೊದಮೊದಲಿಗೆ ಅಲ್ಪ ಪ್ರಮಾಣದಲ್ಲಿ ಹಾಕಬಹುದು. ಆದರೆ food grains ಮೇಲೆ ಹಾಕಿದರೆ ಸ್ವಲ್ಪಮಟ್ಟಿಗೆ ಭಾರವಾಗಲಿಕ್ಕಿಲ್ಲ ಎಂದರೂ ಮಲ್ಟೀಪಾಯಿಂಟು ಎಂದು ಹಾಕಬಾರದು. ಮಲ್ಟೀಪಾಯಿಂಟಿಗೆ ನನ್ನ ವಿರೋಧವಿದೆ. Single point ಎಂದು ಶೇಕಡಾ ಒಂದರಷ್ಟು ರೇಟನ್ನು ಹಾಕಬಹುದು. ಮತ್ತೆ ನೆರೆ ಹೊರೆಯ ಪ್ರಾಂತದವರು ಒಂದು ವೇಳೆ ಇದೇ ಪ್ರಕಾರ ಹಾಕಿದ್ದಾರೆಯೇ ಎನ್ನುವುದನ್ನೂ ನೋಡಿ ಇದನ್ನು ವಿಚಾರ ಮಾಡಲಿಕ್ಕೆ ಅಡ್ಡಿ ಇಲ್ಲ ಎಂದು ನನ್ನ ಅಭಿಪ್ರಾಯ.

ಇನ್ನು ಮೂರನೇ ಪ್ರಾವಿಸೋವಿನಲ್ಲಿ ಕೊಟ್ಟಿದ್ದ ಕನ್‌ಸೆಷನ್ನುಗಳನ್ನು ತೆಗೆಯಬೇಕೆಂದು ಮಾನ್ಯ ಅರ್ಥ ಸಚಿವರು ಹೇಳಿದರು. ನಾಲ್ಕನೇ ಷೆಡ್ಯೂಲಿನಲ್ಲಿ ಹೇಳಿರುವ ಡಿಕ್ಲೇರ್ಡ್‌ಗೂಡ್ಸ್‌ನ ಬಗ್ಗೆ ಖರೀದಿ ಮಾಡುವಾಗಲೂ ಮತ್ತು ವಿಕ್ರಯಮಾಡುವಾಗಲೂ ಟ್ಯಾಕ್ಸು ಹಾಕಬೇಕೆಂದಿದೆ. ಆದರೆ ಹಾಗೆ ವಿಕ್ರಯವಾದ ಮೇಲೆ ಅದನ್ನು ಮೊದಲಿಗೆ ಖರೀದಿ ಮಾಡಿದವರ ಮೇಲೆ ಟ್ಯಾಕ್ಸು ಬೀಳುತ್ತದೆ. ಹೀಗೆ ಎರಡು ಕಡೆಯಲ್ಲಿಯೂ ಟ್ಯಾಕ್ಸನ್ನು ಹಾಕುವುದು ಇದೆ. ಇದನ್ನು ಮಾಡುವುದು ಸರಿಯಲ್ಲ ಎಂದು stored nuts and cotton ಇವುಗಳ ಮೇಲೆ ಹಾಕುವಾಗ ಅರ್ಧದಷ್ಟು ಮಾತ್ರ ಟ್ಯಾಕ್ಸು ಹಾಕಬೇಕೆಂದು ಆಗ ಹೇಳುತ್ತಿದ್ದರು, ಅಲ್ಲದೆ Cotton ಒಳಗೆ Cotton seeds ಬರುತ್ತಿರುವುದರಿಂದ ಅದನ್ನು ಟ್ಯಾಕ್ಸು ಮಾಡಲಿಲ್ಲ. ಅದಕ್ಕಾಗಿ ಶೇಕಡಾ ಇಪ್ಪತ್ತರಷ್ಟು ರಿಲೀಫ್ ಕೊಟ್ಟಿದ್ದರು. ನೆರೆ ಹೊರೆಯ ಪ್ರಾಂತದಲ್ಲಿ ಈ ತರಹ ಇಲ್ಲ, ಎ. ಜಿ. ರಾಮಚಂದ್ರರಾಯರ ಸಮಿತಿಯವರ ಸಲಹೆಯಂತೆ ಈ ವಿನಾಯಿತಿಯನ್ನು ಹಿಂತೆಗೆದುಕೊಂಡಿದ್ದಾರೆ. ಇದಕ್ಕೆ ನಾನೂ ಮೊದಲು ಒಪ್ಪಿಗೆಯನ್ನು ಕೊಡಲು ಸಿದ್ಧವಿರಲಿಲ್ಲ. ಆದರೆ ದೇಶಕ್ಕೆ ಈಗ ಉತ್ಪನ್ನ ಹೆಚ್ಚಿಸುವುದು ಅತ್ಯವಶ್ಯಕ ಎಂದು ನಾನು ಒಪ್ಪುತ್ತೇನೆ. ಇದು ಡಬ್ಬಲ್ ಟ್ಯಾಕ್ಸೇಷನ್ನು ಆಗುವುದಿಲ್ಲ. ಬೇರೆ ಪ್ರಾಂತಗಳಲ್ಲಿರುವಂತೆ ಸೆಂಟ್ರಲ್ ಟ್ಯಾಕ್ಸು ಬೀಳುತ್ತಿದ್ದರೆ ಇದರ ಮೇಲೆ ಇಲ್ಲಿ ಬೀಳುವುದಿಲ್ಲ. Interstate trade ಆಗುತ್ತಿದ್ದರೆ ಆಗ ಸೆಂಟ್ರಲ್ ಟ್ಯಾಕ್ಸು ಬೀಳುತ್ತದೆ. ಸೆಂಟ್ರಲ್ ಟ್ಯಾಕ್ಸು ಆಕ್ಟಿನಂತೆ ಇಲ್ಲಿಯೂ ಪ್ರಾವಿಸೋ ಮಾಡಿರುವುದರಿಂದ ಇದು double Taxation ಆಗುವುದಿಲ್ಲ. ಸೆಂಟ್ರಲ್ ಟ್ಯಾಕ್ಸು ಯಾವ ಸಂದರ್ಭದಲ್ಲಿ ಬೀಳುತ್ತದೆ ಎಂದರೆ, ಯಾವಾಗ interstate ಆಗುತ್ತೆ ಆಗ central tax ಬೀಳುತ್ತದೆ. ಕನ್‌ಸೈನ್‌ಮೆಂಟು ಬೇಸಿಸ್ಸಿನ ಮೇಲೆ ಇಲ್ಲಿ ಟ್ಯಾಕ್ಸು ಅಡ್ಡಿಯಾಗುವುದಿಲ್ಲ ಎಂದು ಇದ್ದರೂ ಜನತೆಯಲ್ಲಿ ಒಂದು ತರದ ಭಯ, ಸಂದೇಹ ಬರುವುದರಿಂದ ಇದನ್ನು ಸರಿಯಾಗಿ ವಿಷದೀಕರಣ ಮಾಡಬೇಕು. ಇದರೊಳಗೆ ಸ್ಪಷ್ಟವಾಗಿಲ್ಲದೆ ಇರುವುದರಿಂದ ಇದು ಸ್ವಲ್ಪ ವಾದಗ್ರಸ್ತವಾಗಿದೆ. ಇದರಲ್ಲಿ first purchaser ಮತ್ತು last purchaser ಎನ್ನುವುದನ್ನು ಸ್ಪಷ್ಟಪಡಿಸಿ ಟ್ಯಾಕ್ಸು ಹಾಕಬಹುದು. ಇದರೊಳಗೆ ಅಂತಹದೇನೂ ಇಲ್ಲ. ಮಾನ್ಯ ಅರ್ಥ ಸಚಿವರು ಈ ಬಿಲ್ಲನ್ನು ಸೆಲೆಕ್ಟು ಕಮಿಟಿಗೆ ಕಳುಹಿಸುತ್ತಿರುವುದರಿಂದ ಆ ಕಾಲಕ್ಕೆ ಈ ಅಂಶಗಳನ್ನು ಸ್ಪಷ್ಟಪಡಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಈಗ ನಮ್ಮ ಮುಂದಿರತಕ್ಕ ಬಿಲ್ಲಿನಲ್ಲಿ ಸೆಕೆಂಡ್ ಷೆಡ್ಯೂಲಿನಲ್ಲಿ ಹೇಳಿರತಕ್ಕ ಪದಾರ್ಥಗಳೇನಿವೆ ಅವುಗಳಿಗೆ ಹಿಂದೆ ಇದ್ದ ಸೆಕೆಂಡ್ ಷೆಡ್ಯೂಲಿನಲ್ಲಿ ಹೇಳಿದ್ದ ಟ್ಯಾಕ್ಸಿಗಿಂತ ಈಗ ಜಾಸ್ತಿ ಆಗಿದೆ. ಕೆಲವು ಐಟಂಗಳಲ್ಲಿ ಶೇಕಡ 3 ಇದ್ದದು ಶೇಕಡ 5 ಏರುತ್ತದೆ. ಇನ್ನು ಕೆಲವು ಪದಾರ್ಥಗಳಿಗೆ ಶೇಕಡ 5 ಇದ್ದುದು ಶೇಕಡ 8 ಕ್ಕೂ ಕೆಲವು ಸಂದರ್ಭಗಳಲ್ಲಿ ಶೇಕಡ 10 ಕ್ಕೂ ಏರಿಸಲಾಗಿದೆ. ಹೀಗೆ ಸುಮಾರು 10-15 ಪದಾರ್ಥಗಳ ಮೇಲೆ ಈ ತೆರಿಗೆದರವನ್ನು ಜಾಸ್ತಿ ಮಾಡಲಾಗಿದೆ. ಆದರೆ ಈಗಾಗಲೆ ಮಾನ್ಯ ಅರ್ಥಿಕ ಸಚಿವರೇನು ಕೆಲವು ಪದಾರ್ಥಗಳ ಬಗ್ಗೆ ಅಂದರೆ ಆರ್ಟಿಕಲ್ 77 ರಿಂದ 81 ರವರೆಗೆ ಏರಿಯೇಟೆಡ್ ವಾಟರ್ಸಿನಿಂದ ಹಿಡಿದು ಚಿಕೋರಿಯ ಐಟಂವರೆಗೆ ಹಿಂದೆ ಇದ್ದುದಕ್ಕಿಂತ ಈಗ ಟ್ಯಾಕ್ಸನ್ನು ಜಾಸ್ತಿ ಮಾಡಲಾಗಿದೆಯೆಂದು ಹೇಳಿದ್ದಾರೋ ಆ ಟ್ಯಾಕ್ಸಿನ ರೇಟು ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿರತಕ್ಕ ಟ್ಯಾಕ್ಸಿನ ದರಕ್ಕಿಂತ ಜಾಸ್ತಿ ಆದ ಪಕ್ಷದಲ್ಲಿ ಇಲ್ಲಿಯ ವ್ಯಾಪಾರ ಕಡಿಮೆಯಾಗಿ ಅಕ್ಕಪಕ್ಕದ ರಾಜ್ಯಗಳಲ್ಲಿ ವ್ಯಾಪಾರ ಜಾಸ್ತಿಯಾಗುತ್ತದೆ. ಆಗ ನಮ್ಮ ವ್ಯಾಪಾರೋದ್ಯಮಗಳಿಗೆ ಧಕ್ಕೆ ಉಂಟಾಗುತ್ತದೆ. ಆದ್ದರಿಂದ ಈ ಪ್ರಕಾರ ಆಗದಂತೆ ಈ ಟ್ಯಾಕ್ಸ್‌ಗಳೆಲ್ಲ ಒಂದೇ ಲೆವೆಲ್‌ನಲ್ಲಿರೋ ಹಾಗೆ ಇಡಬೇಕು. ಇಲ್ಲದಿದ್ದರೆ ತೊಂದರೆಯಾಗುತ್ತದೆ. ಕಂಪ್ಯಾರಿಟೀವ್ ಲಿಸ್ಟನ್ನು ನಮ್ಮ ಮುಂದಿಟ್ಟಿದ್ದಾರೆ. ಆದರೆ ಅದರಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾಗಿರುವಂತೆ ಕಾಣಿಸುತ್ತಿದೆ. ಬರಾಬರಿ ಟೇಬಲ್ ಇಟ್ಟುಕೊಂಡು ನೋಡಿದರೆ ಹಾಗೆ ಕಾಣಿಸುತ್ತಿದೆ ಮಾನ್ಯ ಸಚಿವರು ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೂ ಕೆಲವು ಆರ್ಟಿಕಲ್‌ಗಳೇನಿವೆ ಅವುಗಳಿಗೆ ಮಲ್ಟಿಪಾಯಿಂಟ್ ಟ್ಯಾಕ್ಸ್ ಹಾಕಿದ್ದಾರೆ. ಅದು ಯೋಗ್ಯ ಅಲ್ಲ ಎಂತ ನನ್ನ ಅಭಿಪ್ರಾಯ. ಆಹಾರ ವಸ್ತುಗಳ ಮೇಲೆ ಮಾತನಾಡುತ್ತ ಮೆಣಸಿನಕಾಯಿ, ಸೌದೆ, ಮತ್ತು ನಾಟ ಇವುಗಳ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕಾಗಿ ಇದೆ. ಮೆಣಸಿನಕಾಯಿ ಇದು ಬಡಬಗ್ಗರಿಗೂ ಕೂಡ ಬಹಳ ಅಗತ್ಯವಾದ ವಸ್ತು ಇದರ ಮೇಲೆ ಮಲ್ಟಿಪಾಯಿಂಟ್ ಟ್ಯಾಕ್ಸ್ ಹಾಕಬಾರದು ; ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಬೇಕೆಂದು ಹೇಳುತ್ತೇನೆ. ಇನ್ನು ಈ ಸೌದೆಗೆ ಉಪಯೋಗಿಸತಕ್ಕ ನಾಟಾ ಏನಿದೆ ಇದರ ಮೇಲೆ ಈಗಲೂ ಮಲ್ಟಿ ಪಾಯಿಂಟ್ ಟ್ಯಾಕ್ಸ್‌ಬಿದ್ದಿದೆ. ಕಾರಣ ಏನೆಂದರೆ ಇದರ ಬಗ್ಗೆ ಎಲ್ಲಿಯೂ ವಿನಾಯ್ತಿ ಹೇಳಿಲ್ಲವೆಂದೂ ಮತ್ತು ಈ ಬಗ್ಗೆ ಯಾವ ಷೆಡ್ಯೂಲಿನಲ್ಲೂ ಇದನ್ನು ಸೇರಿಸಿಲ್ಲವೆಂದೂ ಇದರ ಮೇಲೆ ಮಲ್ಟಿಪಾಯಿಂಟ್ ಟ್ಯಾಕ್ಸ್‌ನ್ನು ಹಾಕಿದ್ದಾರೆ, ಜನರು ಇದನ್ನು

ಡೊಮೆಸ್ಟಿಕ್ ಪರ್ಪಸ್‌ಗೆ ಒಯ್ಯುತ್ತಾರೋ, ಮತ್ತೇತಕ್ಕೆ ಒಯ್ಯುತ್ತಾರೋ ಅದು ನಮಗೆ ಗೊತ್ತಿಲ್ಲವೆಂತ ಅವರು ಈ ಫೈರ್‌ವುಡ್ ಮೇಲೆ ಈಗ ಮಲ್ಟಿ ಪಾಯಿಂಟ್ ಟ್ಯಾಕ್ಸನ್ನು ವಿಧಿಸುತ್ತಾರೆ. ಈ ಫೈರ್‌ವುಡ್ಡನ್ನು ಯಾವುದೇ ಕಾರಣಕ್ಕೆ ಉಪಯೋಗಿಸಿದರೂ ಇದಕ್ಕೆ ಸಿಂಗಲ್ ಪಾಯಿಂಟ್ ಟ್ಯಾಕ್ಸನ್ನೇ ಹಾಕಬೇಕೆಂದು ಹೇಳುತ್ತೇನೆ. ಈ ಫೈರ್‌ವುಡ್ ಎಲ್ಲ ಕಾಡಿನಲ್ಲಿ ಉತ್ಪನ್ನವಾಗುತ್ತದೋ ಅಲ್ಲೇ ಇದರ ಮೇಲೆ ಸಿಂಗಲ್ ಪಾಯಿಂಟ್ ಟ್ಯಾಕ್ಸನ್ನು ಹಾಕತಕ್ಕದ್ದು. ಡ್ರೈಡ್ ವೆಜಿಟಬಲ್ಸ್ ಮೇಲೂ ಸಹ ಸಿಂಗಲ್ ಪಾಯಿಂಟ್ ಟ್ಯಾಕ್ಸನ್ನೇ ಹಾಕಬೇಕೆಂದು ಹೇಳುತ್ತೇನೆ. ಫೈರ್‌ವುಡ್ಡಿಗೆ ಹೇಳಿರತಕ್ಕ ಕಾರಣಗಳೇ ಇದಕ್ಕೂ ಅನ್ವಯಿಸುತ್ತದೆ. ಆದರೆ ಎಲ್ಲಿ ಟಿಂಬರ್ ಟ್ಯಾಕ್ಸ್ ಇವೇಜ಼ನ್ ಆಗ ವುದೋ ಅಲ್ಲಿ ಮಾತ್ರ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಹಾಕಿದರೂ ಹಾಕಬಹುದು. ಇಲ್ಲವಾದರೆ ಸಿಂಗಲ್ ಪಾಯಿಂಟ್ ಟ್ಯಾಕ್ಸನ್ನೇ ಹಾಕಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಗಂಗಾಧರನಾಮೋಷಿ (ಗುಲ್ಬರ್ಗ).—ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದವರು ಸಭೆಯ ಮುಂದೆ ಮಂಡಿಸಿರತಕ್ಕ ಮತ್ತು ಈಗಾಗಲೇ ಈ ಸಭೆಯಲ್ಲಿ ಪಾಸಾಗಿರತಕ್ಕ 2-3 ಬಿಲ್ಲುಗಳೂ ಮತ್ತು ಈ ಸಭೆಯ ಮುಂದೆ ಇನ್ನೂ ಬರಲಿರುವ 4-5 ತೆರಿಗೆ ಮಸೂದೆಗಳೂ ಏನಿವೆ ಇವುಗಳನ್ನೆಲ್ಲ ನೋಡಿದರೆ ಈ ಕಾಂಗ್ರೆಸ್ಸಿನವರು ಹೇಳುತ್ತಿರುವ ಆ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿ ಎಂಬ ಶಬ್ದಗಳನ್ನೇನು ಅವರು ಹೇಳುತ್ತಿದ್ದಾರೆ ಆ ಶಬ್ದಗಳಿಗೆ ಈಗ ನಮ್ಮ ಡಿಕ್ಷನರಿಗಳಲ್ಲಿ ಏನು ಅರ್ಥವಿರುತ್ತೋ ಅದನ್ನು ಈಗ ಬದಲಾವಣೆ ಮಾಡಬೇಕಾದಂಥ ಕಾಲ ಬಂದಿದೆ. ಈಗ ಅನೇಕ ಪಾಲಿಟೀಷಿಯನ್ಸ್ ಮತ್ತು ಸ್ಟೂಡೆಂಟ್ಸ್‌ಗಳು ನಮ್ಮನ್ನು ಕೇಳುತ್ತಿದ್ದಾರೆ. ಏನೆಂದರೆ, ಎಲೆಕ್ಷನ್ ಆಗತಕ್ಕ ಕಾಲದಲ್ಲಿ ಕಾಂಗ್ರೆಸ್ಸಿನವರು ದೇಶದಲ್ಲಿ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಜಾರಿಗೆ ತರುತ್ತೇವೆಂದು ಪ್ರಚಾರ ಮಾಡಿ, ಚುನಾವಣೆಗಳಾದ ಮೇಲೆ ನಾನಾ ರೀತಿಯ ತೆರಿಗೆಗಳನ್ನು ಜನರ ಮೇಲೆ ಹಾಕತಕ್ಕದೇನಿದೆ ಇದೇನೇನು ಆ "ನಿಮ್ಮ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿ ?" ಎಂತ ಅವರು ಕೇಳುತ್ತಿದ್ದಾರೆ. ಆದರೆ ಆ ಕಾಂಗ್ರೆಸ್ಸಿನವರ ಡಿಕ್ಷನೆರಿಯಲ್ಲಿ ಆ ರೀತಿ ಅರ್ಥವಿರಬಹುದು ! ಇನ್ನು ಮೇಲೆ ಕಾಂಗ್ರೆಸ್ಸಿನವರಿಗೇ ಒಂದು ಪ್ರತ್ಯೇಕವಾದ ಡಿಕ್ಷನೆರಿಯನ್ನು ಬರೆಯಬೇಕಾಗಿದೆ ಎಂತ ಅವರು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ಜನರ ಮೇಲೆ ಈ ತೆರಿಗೆಗಳನ್ನೆಲ್ಲಾ ಹಾಕಬಾರದೆಂದು ಅನೇಕ ಮುನಿಸಿಪಾಲಿಟಿಗಳವರೂ ಮತ್ತು ವ್ಯಾಪಾರಸ್ಥರೂ ಬಹಳ ಒತ್ತಾಯ ಮಾಡಿದ್ದಾರೆ. ಅನೇಕ ವ್ಯಾಪಾರಸ್ಥರು ತಮ್ಮ ಪ್ರತಿಭಟನೆಯನ್ನು ಸೂಚಿಸಲು ಅಂಗಡಿ ಮಳಿಗೆಗಳನ್ನೆಲ್ಲ ಮುಚ್ಚಿದರು. ಅವರು ಸರ್ಕಾರದವರಿಗೆ ಇಷ್ಟೆಲ್ಲ ಪ್ರತಿಭಟನೆ ಸೂಚಿಸಿದ್ದರೂ ಅದಿನ್ನು ಸಾಲದೇನು ? ಆದರೆ ಮಂತ್ರಿಗಳು ಈ ತೆರಿಗೆಗಳನ್ನು ಡೆಮೊಕ್ರೆಟಿಕ್ ಪ್ರೊಸೀಜರ ಮೇಲೆ ಹಾಕಲಾಗುತ್ತದೆಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರು ಹೇಳತಕ್ಕ ಆ ಡೆಮೊಕ್ರೆಟಿಕ್ ಪ್ರೊಸೀಜರ್ ಏನೆಂದರೆ ವರ್ತಕರೂ ಅಂಗಡಿ ಮಳಿಗೆಗಳನ್ನು ಮುಚ್ಚುವುದು ! ಮುನಿಸಿಪಾಲಿಟಿಗಳವರು ಈ ತೆರಿಗೆ ವಿಧಿಸಬಾರದೆಂದು ನಿಯೋಗ ಬರುವುದೂ ಇದೆಲ್ಲ ಡೆಮೊಕ್ರೆಟಿಕ್ ಪ್ರೊಸೀಜರೇನೋ ? ಸಾರ್ವಜನಿಕರೂ, ಮುನಿಸಿಪಾಲಿಟಿಗಳವರೂ ಮತ್ತು ವ್ಯಾಪಾರಸ್ಥರೂ ಅವರು ಏನು ಹೇಳಿದರೂ ಈ ಸರ್ಕಾರ ಕೇಳುತ್ತಿಲ್ಲ. ಅವರು ಸರ್ಕಾರದವರಿಗೆ ನಾಳೆ ಸರ್ಕಾರದವರು ತರಲಿರುವ ಬಿಲ್ಡಿಂಗ್ ಟ್ಯಾಕ್ಸ್ ಮತ್ತು ಅರ್ಬನ್ ಇಮ್ಮೊವಬಲ್ ಟ್ಯಾಕ್ಸ್ ಹಾಕಬಾರದೆಂದು ಕೇಳುತ್ತಿದ್ದಾರೆ. ಆದರೆ ಸರ್ಕಾರದವರು ಅವರು ಹೇಳುತ್ತಿರುವುದನ್ನು ಕೇಳುತ್ತಿಲ್ಲ. ಹಾಗಿರುವಾಗ ನಮ್ಮ ಮಂತ್ರಿಗಳು ಮತ್ತೆ ಯಾವ ಡೆಮೊಕ್ರೆಟಿಕ್ ಪ್ರೊಸೀಜರಿನಮೇಲೆ ಈ ತೆರಿಗೆಗಳನ್ನೆಲ್ಲಾ ವಿಧಿಸುತ್ತಿದ್ದಾರೆ ಎಂಬುದನ್ನು ಕೇಳಬೇಕಾಗಿದೆ ? ಆದರೆ ಈಗ ಕೇಂದ್ರ ಸರ್ಕಾರ ಎಷ್ಟೋ ತೆರಿಗೆಗಳನ್ನು ವಿಧಿಸಿದೆ. ಆದರೆ ಅವರು ಆ ತೆರಿಗೆ ಮೇಲೆ ಯಾವ ಸೆಸ್ಸನ್ನೂ ವಿಧಿಸಿರುವುಲ್ಲ. ಈಗ ತಾನೆ ಶ್ರೀ ಜಿ. ವಿ. ಗೌಡರು ಮೈಸೂರು ಸರ್ಕಾರ ಕೇಂದ್ರದಿಂದ ಮೂರನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಸಾಕಷ್ಟು ಪಾಲನ್ನು ಪಡೆದಿಲ್ಲ. ಆ ಬಗ್ಗೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳಬೇಕೆಂದು ಅವರು ಹೇಳಿದ್ದಾರೆ ಆ ಬಗ್ಗೆ ಸರ್ಕಾರಕ್ಕೆ ಮನಸ್ಸಿಲ್ಲ. ಕೇಂದ್ರ ಸರ್ಕಾರದೊಡನೆ ವ್ಯವಹಾರ ಮಾಡಿ ತಮ್ಮ ನ್ಯಾಯವಾದ ಷೇರನ್ನು ಪಡೆಯತಕ್ಕ ಶಕ್ತಿ ಈ ಸರ್ಕಾರಕ್ಕಿಲ್ಲ. ಇಷ್ಟೆಲ್ಲಾ ನ್ಯೂನತೆಗಳಿದ್ದಾಗ್ಯೂ ಈ ಸರ್ಕಾರ ಡೆಮೊಕ್ರೆಟಿಕ್ ಪ್ರೊಸೀಜರ್ ಮತ್ತು ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಗಳೆಂಬ ಮಾತನ್ನು ಯಾವ ಆಧಾರದ ಮೇಲೆ ಮಾತನಾಡುತ್ತಿದ್ದಾರೋ ಅದು ಗೊತ್ತಾಗುತ್ತಿಲ್ಲ.

A.G.R. ಕಮಿಟಿ ರಿಪೋರ್ಟಿನಲ್ಲಿ 8 ಜನ ಮಂತ್ರಿಗಳು ಈ ರಾಜ್ಯಕ್ಕೆ ಸಾಕೆಂತ ಅವರು ತಿಳಿಸಿದ್ದರೆ ಈಗ ಏತಕ್ಕೆ 25 ಜನ ಮಂತ್ರಿಗಳನ್ನು ಮಾಡಿಕೊಂಡಿದ್ದೀರೆಂದು ಕೇಳಿದ್ದಕ್ಕೆ ಶ್ರೀ ಎಂ. ವಿ. ಕೃಷ್ಣಪ್ಪನವರು ಅದಕ್ಕೆಲ್ಲ ಏನು ಖರ್ಚಾಗುತ್ತೆ ? ಎಲ್ಲೊ 4-5 ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಬಹುದು ಎಂತ ಹೇಳಿದರು. ಹಾಗೆಂದರೆ ಆ 4-5 ಲಕ್ಷ ರೂಪಾಯಿಗಳಿಗೇನೂ ಬೆಲೆಯೇ ಇಲ್ಲವೆಂತಲೋ ? ಈಗ್ಗೆ ಸ್ವಲ್ಪ ಹೊತ್ತಿನ ಹಿಂದೆ ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿ ಕೊಡಬೇಕೆಂದು ಕೇಳಿದಾಗ ಆ ಬಗ್ಗೆ ಹಳ್ಳಿ ಬಡ ಜನರು ಪಾಪುಲರ್ ಕಾಂಟ್ರಿಬ್ಯೂಷನ್ ಕೊಡಬೇಕೆಂದು ಹೇಳಿದರು. ಹೀಗೆ ಸರ್ಕಾರ ಪ್ರತಿಯೊಂದು ಬಾಬಿನಲ್ಲೂ ಪಾಪುಲರ್ ಕಾಂಟ್ರಿಬ್ಯೂಷನ್ ಕೇಳುವುದಕ್ಕೆ ಪ್ರಾರಂಭಿಸಿದ್ದರಿಂದ ಅವರ ಸ್ಕೀಮುಗಳೆಲ್ಲವೂ ಅನ್ ಪಾಪುಲರ್ ಆಗಿರುತ್ತದೆ. ಈ ದಿವಸ ವೃಥಾ ಮಂತ್ರಿಮಂಡಳದ ವಿಸ್ತರಣೆಗೆ ಖರ್ಚು ಮಾಡುತ್ತಿರುವ ಆ 4-5 ಲಕ್ಷ ರೂಪಾಯಿಗಳನ್ನು ನಮ್ಮ ಮೂರನೆ ಯೋಜನೆಯಲ್ಲಿ ಅಡಕ ಮಾಡದೆ ಕೈ ಬಿಟ್ಟಿರತಕ್ಕ ಹಲವಾರು ಯೋಜನೆಗಳಿಗೆ ಬಳಸಬಹುದಾಗಿತ್ತು. ವಿದ್ಯಾಭಿವೃದ್ಧಿಗೆ ಬಳಸಬಹುದಿತ್ತು. 4–5 ವರ್ಷಗಳಲ್ಲಿ ಈ ಮೊಬಲಗಿನಿಂದ ದೇಶದಲ್ಲಿ ನೂರಾರು ಬಾವಿಗಳನ್ನು ತೆಗೆಸಬಹುದಾಗಿತ್ತು. ಅದರಿಂದ ದೇಶದಲ್ಲಿ ಹೆಚ್ಚು ಬೆಳೆ ಬೆಳೆಯಲು ಅನುಕೂಲವಾಗುತ್ತಿತ್ತು. ಆದರೆ ಈ ಸರ್ಕಾರದವರು ಆ A.G.R. ಕಮಿಟಿಯವರು ಸಲಹೆ ಮಾಡಿರತಕ್ಕ ಕೆಲವು ಐಟಂಗಳನ್ನು ಒಪ್ಪಿಕೊಂಡು ಅವರು ಸಲಹೆ ಮಾಡದೆ ಇರತಕ್ಕ ಬಾಬಿಗೂ ಕೈ ಹಾಕಿದ್ದಾರೆ. ಮುನಿಸಿಪಾಲಿಟಿಗಳವರು ಯಾವ ಬಾಬಿಗೆ ಟ್ಯಾಕ್ಸ್ ಹಾಕಬಾರದೆಂದು ಹೇಳಿದ್ದಾರೋ ಆ ಬಾಬುಗಳ ಮೇಲೂ ಈಗ ಸರ್ಕಾರ ಟ್ಯಾಕ್ಸ್ ಹಾಕಲು ಹೊರಟಿದೆ. ವರ್ತಕರ ಮಾತನ್ನಂತೂ ಸರ್ಕಾರ ಕೇಳುವುದೇ ಇಲ್ಲ. ಈ ತೆರಿಗೆಗಳ ವಿಚಾರದಲ್ಲಿ ಶ್ರೀ ಕೃಷ್ಣ ಶೆಟ್ಟರು ಅಜಿಟೇಟ್ ಮಾಡುತ್ತೇವೆಂದು ಹೇದ್ದಕ್ಕೆ ಮುಖ್ಯ ಮಂತ್ರಿಗಳು

(ಶ್ರೀ ಗಂಗಾಧರನಾಮೋಷಿ)

ತಾವು ಅದಕ್ಕೆಲ್ಲ ಹೆದರುವುದಿಲ್ಲ ಎಂತ ಹೇಳಿದರು. ಈ ಹೊತ್ತು ಈ ಮಂತ್ರಿಗಳು ಆ ರೀತಿ ಹೆದರದಂತೆ ಆಗಿದ್ದಾರೆ. ಇವರನ್ನು ಹೆದರಿಸಲು ಜನ ಮತ್ತೇನು ಮಾಡಬೇಕೋ ಗೊತ್ತಾಗುತ್ತಿಲ್ಲ. ಗುಲ್ಬರ್ಗ, ಬೆಳಗಾಂನಲ್ಲಿ ವರ್ತಕರುಗಳೆಲ್ಲ ಇಡೀ ಅಂಗಡಿಗಳನ್ನು ಮುಚ್ಚಿದ್ದರು. ಅವರು ಇನ್ನೂ ಏನು ಮಾಡಬೇಕಾಗಿತ್ತು? ಈ ಹೊತ್ತು ಈ ಕಾಂಗ್ರೆಸ್ ಪಕ್ಷದವರು ಆ ಮಹಾತ್ಮಗಾಂಧಿ, ನೆಹರೂ ಅವರ ಹೆಸರನ್ನು ಹೇಳಿಕೊಂಡು ಕಳೆದ ಚುನಾವಣೆಯಲ್ಲಿ 138 ಜನರು ಆರಿಸಿ ಬಂದಿದ್ದಾರೆ. ಹಿಂದಿನ ಚುಣಾವಣೆಗಿಂತ ಕಳೆದ ಚುನಾವಣೆಯಲ್ಲಿ 20 ಜನ ಕಾಂಗ್ರೆಸ್ ಪಕ್ಷದಲ್ಲಿ ಕಡಮೆಯಾಗಿದ್ದಾರೆ. ಮುಂದಿನ ಚುಣಾವಣೆಗೆ ಆ ಸಂಖ್ಯೆ 20 ಕ್ಕೆ ಬದಲಾಗಿ 70 ಆಗಬಹುದು. ಅಂಥ ಪ್ರಸಂಗ ಬರಗೊಡದಂತೆ ಆಡಳಿತ ಪಕ್ಷ ನೋಡಿಕೊಳ್ಳುವುದು ಉತ್ತಮ ಎಂತ ನಾನು ಅವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಇದೇನು ಟ್ಯಾಕ್ಸು ಸ್ವಾಮಿ ಇದು? ಹುಟ್ಟಿದ ಘಳಿಗೆಯಿಂದ ಹುಡುಗನನ್ನು ಎರಿಯಬೇಕಾದರೆ ಎಣ್ಣಿಯ ಮೇಲೆ ತೆರಿಗೆ. ಸತ್ತರೆ ಮತ್ತ ಅಲ್ಲೂ ಟ್ಯಾಕ್ಸು. ಹೆಣ ಸುಡುವ ಕಟ್ಟಿಗೆ ಮೇಲೆ ಟ್ಯಾಕ್ಸ್ ಹಾಕುತ್ತೀರಿ. ಇದು ಅರ್ಥವಾಗುವುದಿಲ್ಲ. ಟ್ಯಾಕ್ಸ್ ಕೊಡದಿದ್ದರೆ ಹೆಣ ಸುಡುವುದಿಲ್ಲ ಎನ್ನುತ್ತಾರೆ ಸ್ವಾಮಿ. ಇದರ ಜೊತೆಗೆ ಇನ್ನೊಂದು ಟ್ಯಾಕ್ಸ್ ನಾನು ಹೇಳುತ್ತೇನೆ ಅದನ್ನು ಹಾಕಿ. ಅದು ಯಾವುದೆಂದರೆ ಹೆಣ ಸುಟ್ಟಮೇಲೆ ಬೂದಿ ಉಳಿಯುತ್ತದೆಯಲ್ಲಾ ಅದನ್ನು ಕೃಷ್ಣಾ ನದಿಗೆ ಹಾಕುತ್ತಾರೆ. ಅಲ್ಲಿ ಯಾರನ್ನಾದರೂ ಕೂಡಿಸಿದರೆ ಅದಕ್ಕೂ ಟ್ಯಾಕ್ಸ್ ಬರುತ್ತದೆ. ಅದಕ್ಕೂ ಟ್ಯಾಕ್ಸ್ ಹಾಕುತ್ತೀರೋ ಏನೋ ಎಂದು ಅನಿಸುತ್ತದೆ. ಈಗಾಗಲೇ ಧಾರಣ ವಾಸಿಗಳು ಏರಿವೆ; ರೂಪಾಯಿಗೆ 1¼ ಸೇರು ಜೋಳ ಸಿಕ್ಕುವುದಿಲ್ಲ. 70-80 ನ.ಪೈ.ಗೆ ಒಂದು ಕಿಲೋ ಅಕ್ಕಿ ಧಾರಣೆ ಆಗಿದೆ. ಈ ಪ್ರಕಾರ ಅನ್ನದ ಮೇಲೆ ಟ್ಯಾಕ್ಸ್, ನೀರಿನ ಮೇಲೆ ಟ್ಯಾಕ್ಸ್, ಬಡವರ ಮೇಲೆ ಹಾಕಿದರೆ ಬಡವರು ಹೇಗೆ ಬದುಕಬೇಕು ಎಂಬುದನ್ನು ದಯಮಾಡಿ ತಾವು ಯೋಚನೆ ಮಾಡಬೇಕು. ಇಷ್ಟೇ ಅಲ್ಲ ಪ್ರೈಸ್ ಕಂಟ್ರೋಲ್ ಮಾಡುತ್ತೀರಾ ಎಂದರೆ ಅದಕ್ಕೂ ತಯಾರಿಲ್ಲ. ಬಹಳ ಕಷ್ಟವಾಯಿತು. ಕೂಗಾಟ ನಡೆಯಿತು ಎಂದರೆ ಯಾವುದೋ ದೇಶದವರು ಯಾವ ಕಾರಣದಿಂದಲೋ ದಾನ ಕೊಟ್ಟಿರತಕ್ಕ ಹುಳುಕು, ಕೊಳಕು ಗೊಬ್ಬರಮಾಡತಕ್ಕ ಗೋಧಿ, ಅಕ್ಕಿ ತಂದು ಚೀಪ್ ರೇಟ್‌ನಲ್ಲಿ ಕೊಡುತ್ತೀರಿ. ಇದೆಲ್ಲಾ ಮಾಡಿ ನೀವು ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿ, ಸಮಾಜವಾದ ಇಂಥಾದ್ದೆಲ್ಲಾ ಮಾತನಾಡುತ್ತಾ ಇದ್ದೀರಿ. ಆದ್ದರಿಂದ ನಾನು ತಮ್ಮ ಮುಖಾಂತರ ಸರ್ಕಾರದವರಿಗೆ ಬೇಡಿಕೊಳ್ಳುತ್ತಾ ಇದ್ದೇನೆ, ದಯಮಾಡಿ ಈ ತಿದ್ದುಪಡಿ ಸೆಕ್ಷನ್ 5 ಏನಿದೆ, ಜೋಳ, ಅಕ್ಕಿ, ರಾಗಿ ಸಲುವಾಗಿ ಅದನ್ನು ಬಿಟ್ಟುಬಿಡಿ. ಇಷ್ಟೇ ಅಲ್ಲ ಮೆಣಸಿನಕಾಯಿನ ಮೇಲೆ ಟ್ಯಾಕ್ಸ್ ಹಾಕಿದ್ದೀರಿ. ಹೋದಸಾರಿ ಪೇಪರ್‌ನಲ್ಲಿ ನೋಡಿದೆ ಶ್ರೀಮಾನ್ ಮರಿಯಪ್ಪನವರು ಫುಡ್‌ಗ್ರೇನ್ಸ್ ಮೇಲೆ ಟ್ಯಾಕ್ಸ್ ಹಾಕಬಾರದು ಎಂದು ಹೇಳಿ ಹೈದರಾಬಾದ್ ಪ್ರದೇಶದಲ್ಲಿ ಇದ್ದುದನ್ನು ಅನುಸರಿಸಿದರು. ಅದೆ ಇವತ್ತಿನ ದಿವಸ ಜತ್ತಿ ಅವರು ಆರ್ಥಿಕ ಮಂತ್ರಿಗಳಾಗಿ ಅದನ್ನು ಹಾಕುತ್ತಾ ಇದ್ದಾರೆ. 42 ಕೋಟಿ ರೂಪಾಯಿ ಹೊಂದುವುದರ ಸಲುವಾಗಿ ಎಲ್ಲಾ ಜನರನ್ನೂ ಒಂದೇ ಖಡ್ಗದಿಂದ ಅವರ ಕುತ್ತಿಗೆ ಕತ್ತರಿಸುತ್ತೇವೆ ಎಂದು ಏನು ಈ ತಿದ್ದುಪಡಿಯನ್ನು ತಂದಿದ್ದೀರಿ ಈ ಪ್ರಕಾರ ದಯಮಾಡಿ ಮಾಡಬೇಡಿ. ನಮ್ಮ ಮಾನ್ಯ ಮಿತ್ರರು ಹೇಳಿದರು, ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಇನ್ನು ಸ್ವಲ್ಪ ಹೆಚ್ಚು ಮಾಡಿರಿ ಎಂದರೆ ಮಾಡುವುದಿಲ್ಲ. ಆದ್ದರಿಂದ ದಯವಿಟ್ಟು ಯಾರು ಹೆಚ್ಚು ಟ್ಯಾಕ್ಸ್ ಕೊಡಲಿಕ್ಕೆ ಯೋಗ್ಯರಾಗಿದ್ದಾರೆಯೋ, ಯಾರ ಹತ್ತಿರ ದುಡ್ಡು ಇದೆಯೋ ಅವರ ಹತ್ತಿರ ತೆಗೆದುಕೊಳ್ಳಿ. ಬಡವರಿಗೆ ಈಗ ಉದ್ಯೋಗಗಳೂ ಕೂಡ ಸಿಕ್ಕುತ್ತಿಲ್ಲ. ಈ ರೀತಿ ಬೇರೆ ಬೇರೆ ರೀತಿಯಾಗಿ ತೊಂದರೆಯಲ್ಲಿ ಅವರು ಸಿಲುಕಿರುವಾಗ ಅವರಿಂದ ತೆರಿಗೆ ತೆಗೆದುಕೊಳ್ಳುತ್ತೇವೆ ಎಂದರೆ ಇದು ಯಾವ ಮರ್ಯಾದೆಯೋ ಯಾವ ನೀತಿಯೋ ನನಗೆ ಗೊತ್ತಾಗುವುದಿಲ್ಲ. ದುರಭಿಮಾನದಿಂದ ಪ್ರೊಹಿಬಿಷನ್ ಮುಂದುವರಿಸುತ್ತಾ ಇದ್ದೀರಿ. ಕಾಂಗ್ರೆಸ್ ಪಾರ್ಟಿ ಮೀಟಿಂಗ್‌ನಲ್ಲಿ ಪ್ರೊಹಿಬಿಷನ್ ತೆಗೆಯಿರಿ ಎಂದು ನಿಮ್ಮ ಮಿತ್ರರೇ ಹೇಳಿದ್ದಾರೆ. ಅದು failure ಆಗಿದೆ ಎಂದು ಒಪ್ಪಿದ್ದಾರೆ. ಎ.ಜಿ.ಆರ್. ಕಮಿಟಿ ರಿಪೋರ್ಟ್‌ನಲ್ಲಿ ಆಂಧ್ರ ಸರ್ಕಾರದವರು ರಚನೆ ಮಾಡಿದ ಕಮಿಟಿಯವರು ಪ್ರೊಹಿಬಿಷನ್ failure ಆಗಿದೆ ಎಂದು ಹೇಳಿರುವುದನ್ನು ಕೊಟ್ಟಿದ್ದಾರೆ. ಇಷ್ಟೆಲ್ಲಾ ಆಗಿ, ಗೊತ್ತಿದ್ದೂ ಕೂಡ ಅದನ್ನು ಮುಂದುವರಿಸುತ್ತಾ ಇದ್ದೀರಿ. ಪ್ರೊಹಿಬಿಷನ್ ಸ್ಕ್ರ್ಯಾಪ್ ಮಾಡಿದರೆ 15 ಕೋಟಿ ರೂಪಾಯಿ ಬರುತ್ತದೆ. 15 ಕೋಟಿ ರೂಪಾಯಿ ಬಂದರೆ ಎಷ್ಟು ಸ್ಕೂಲುಗಳನ್ನು ತೆಗೆಯಬಹುದು? ಎಷ್ಟು ಪಂಚವಾರ್ಷಿಕ ಯೋಜನೆಗಳನ್ನು ಮಾಡಬಹುದು. ಎಷ್ಟು ಬಡವರ ಉದ್ಧಾರ ಮಾಡಬಹುದು? ಒಬ್ಬ ಹುಡುಗ ಕಾಲೇಜಿನಲ್ಲಿ ಓದುತ್ತಿದ್ದವನು ಹೇಳಿದ, ಇದೆಲ್ಲಾ ಕುಡಿಯುವವರು ನಮ್ಮ ತಂದೆ ತಾಯಿಗಳು, ಕುಡಿದು ಹಾಳಾಗುತ್ತಿದ್ದಾರೆ. ಪಾನ ನಿರೋಧ ಬಂದೂ ಕೂಡ ಪ್ರಯೋಜನವಿಲ್ಲ ಇದಕ್ಕೆ ಬರತಕ್ಕ ದುಡ್ಡನ್ನಾದರೂ ತೆಗೆದುಕೊಂಡು ಒಳ್ಳೆಯ ಶಾಲೆಗಳನ್ನು ಒಳ್ಳೆಯ ದವಾಖಾನೆಗಳನ್ನು ಕೊಡಬಹುದು, ಸ್ಕಾಲರ್‌ಷಿಪ್ ಮುಂತಾದುವನ್ನು ಕೊಡಬಹುದು ಎಂದು ಬೇಡಿಕೊಳ್ಳುತ್ತೇವೆ ಎಂದು ಎಷ್ಟೋ ಜನ ಬಡವರು ಹೇಳುತ್ತಾ ಇದ್ದುದನ್ನು ಈ ಸರ್ಕಾರ ಮಾಡುತ್ತಾ ಇಲ್ಲ. ಬರೀ ದುರಭಿಮಾನದಿಂದ ಪ್ರೊಹಿಬಿಷನ್ ಇಟ್ಟುಕೊಂಡು ಮತ್ತೆ ಬೇರೆ ಬೇರೆ ಖರ್ಚು ಇಟ್ಟುಕೊಂಡು ಆಫೀಸಿನಲ್ಲಿ ಹೆಚ್ಚು ಸಿಬ್ಬಂದಿ ಇಟ್ಟುಕೊಂಡು ಇಷ್ಟೆಲ್ಲಾ ಮಾಡಿ ಈ ಟ್ಯಾಕ್ಸನ್ನು ಒಪ್ಪಿರಿ ಎಂದರೆ ಹೇಗೆ ಒಪ್ಪಿಕೊಳ್ಳಬೇಕು? ಮಾನ್ಯ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರು ತಮ್ಮ ಕಾಲದಲ್ಲಿ ಬಡವರ ಮೇಲೆ ಟ್ಯಾಕ್ಸ್ ಹೇರುವುದಿಲ್ಲ ಎಂದು ಹೇಳಿ ಮುಂಬೈನಲ್ಲಿ ಮಾತನಾಡಿದ್ದಾರೆ. ಮೈಸೂರು ಮಾದರೀ ದೇಶ ಎಂದು ಹೇಳುತ್ತಾ ಇದ್ದೀರಿ. ಪ್ರೊಹಿಬಿಷನ್ ಸ್ಕ್ರ್ಯಾಪ್ ಮಾಡಿ ಇಡೀ ದೇಶಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಲೀಡ್ ಕೊಡುತ್ತಾರೆ ಎಂದು ನಂಬುತ್ತೇನೆ. ಇಷ್ಟೇ ಅಲ್ಲಾ, ಇದು complete failure ಎಂಬುದು ಎಲ್ಲಾ ಜನರಿಗೂ ಗೊತ್ತಿದೆ. ಆದರೆ Who is to bell the cat ಎಂಬ ಪ್ರಶ್ನೆ ಇದೆ. ಅದಕ್ಕೆ ಯಾರು ಗಂಟೆ ಕಟ್ಟಬೇಕು ಅಂತ. 2 ಕೋಟಿ 40 ಲಕ್ಷ ಮೈಸೂರು ದೇಶದ ಜನರಿಗೆ ಹಿತವಾಗುವುದಾದರೆ ಶ್ರೀಮಾನ್ ನಿಜಲಿಂಗಪ್ಪನವರೇ ಬೆಕ್ಕಿನ ಕೊರಳಿಗೆ ಗಂಟೆ ಕಟ್ಟಬೇಕೆಂದು ಬಹಳ ವಿನಯದಿಂದ ಬೇಡಿಕೊಳ್ಳುತ್ತೇನೆ. ಈ ಎಲ್ಲಾ ತೆರಿಗೆಗಳನ್ನೂ ಹಿಂತೆಗೆದುಕೊಳ್ಳಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†Sri GANJI VEERAPPA (Harihar).—Mr. Deputy Speaker, Sir, I rise to support the general principles of this Bill. I have listened with rapt attention to the speech made by the Leader of Opposition. This is the fourth financial bill that is brought before the House. Of course, it is open for him to oppose the measures. But, he is opposing this measure only on one principle, namely, perhaps Government has not been able to do all the things that he expects, and so, he is not in favour of giving any more money to the Government. Sir, to achieve the objects of the Plans and to make it a really Welfare State, I do not think any friend disputes the fact, we require more funds. If really they were anxious to see that the Plans became a success, I expected them to give alternative suggestions to raise funds for the execution of the Plans without resorting to taxation measures. After all, Government does not say that this is the only way to get money. So, it is open for the Opposition to suggest other methods of taxation which do not touch anybody.

[MR. DEPUTY SPEAKER in the Chair].

Sir, any taxation measure is bound to affect some interest or the other. We must choose the best among them, and to the Government it appears that this is the best method of having a taxation measure. There cannot be any taxation measure without touching anybody else. We cannot get money by magic. Sir, the Leader of the Opposition has failed to give any suggestion in spite of the fact that he is opposing every Bill. I expected him to do it.

5-00 P.M.

Sri S. SIVAPPA.—We have got our own plans. We will exchange places and we will implement them.

Sri GANJI VEERAPPA.—So far as this Bill is concerned, what I feel is—after all, what is the test that has to be applied. The test naturally would be to see whether the tax burden is distributed among all sections of the people equitably. Applying this test, I feel that this measure is one which deserves our support.

With regard to details, I have got my own suggestion to make to the Government. Firstly, Sir, I feel that the present cost of living is very high even as it is. And looking into some of the measures that are before us, namely the Agricultural Income tax Bill and other measures which indirectly have a bearing on the cost of living, if we levy sales-tax on cereals as proposed here, I am sure Sir, that will affect our cost of living. It is our duty to see that the prices of foodstuffs do not arbitrarily go high. That is the aim of this Government and also that of the Government of India, because they say that the price-line must be held. So, with regard to this aspect of the Bill, namely, the sales-tax on food grains, I suggest to the Government that if possible they may see that no levy is made on the food grains, and further Sir, I see here a tendency to change over from the single-point to multi-point on several commodities here. Perhaps, the object is to get more money. What I suggest is, our experience with regard to these commodities on which levy is made at several points—multi-points, what we see is, it is cumbersome. Several people to whom these articles pass from hand to hand, have to maintain accounts. They have to collect the tax. They have to pay. There is a lot of scope for evading the tax in this multi-point system. I feel Sir, to make it more simplified and to avoid leakage of tax, single-point is the best. That is the experience that we have derived so far as the levy at multi-point and I hope that Government will also agree with me when I say that this multi-point levy is cumbersome. I do not know whether Mr. Gadag will agree with me. To my mind, it appears that the single point is the best method to avoid evasions. We may disagree on this. Therefore my submission is, if really the Government is anxious to levy tax on food grains, I suggest that instead of this multi point at least a single-point tax may be levied. That is one thing with regard to the general principles of this levy.

Sri G. V GOWDA.—Multi-point till it reaches the consumer.

Sri GANJI VEERAPPA.—Because, when it reaches the consumer, ultimately, it will have passed through so many hands and so much tax burden will be there. So, to avoid taxation burden, as well as to avoid evasion, I feel that instead of multi-point, single point tax may be adopted. That is so far as my experience goes with regard to the collection of taxes.

Sri K. P. GADAG.—As regards this single-point levy, it is bound to be heavy, but it has got this merit that scope for leakage is very much less. But whether it is single point or multi-point, leakage will be always there. But in the case of single-point, scope for leakage is very much reduced.

Sri GANJI VEERAPPA.—I am that glad Sri Gadag has agreed with me that it will increase the tax burden. So far as the other point is concerned, I will substantiate how the leakage will be more in multi-point system. Sir, it is possible that goods may pass from hand to hand without any receipt or any entries in between. We have come across such cases during our practice as Lawyers. We have conducted cases of this type It is possible for goods to pass on without any entries in accounts. That is why I feel that the multi-point system is not good even from the point of preventing the evasion of tax. I think the Finance Minister knows this also. There is nothing new in this. Therefore, I feel that single-point is the best even from other aspects.

Now, if you take particular items, with regard to Chillies, I am particularly acquainted with this because, taxation at present is at a single-point. Now it is proposed to levy at multi-point. I hope my friend the Finance Minister will agree with me when I say that Chillies is the one commodity which is essential to poor men even. Like foodgrains, this is also a very essential commodity. The poorest man requires it. It is better in my opinion that there is no taxation on this item of Chillies. Of course Government want money. If that is so, what I feel is, that instead of multi-point, I suggest that existing levy at single-point may be continued.

It has got be to looked at from the aspect of trade also. In the neighbouring Maharashtra area I understand there is no sales-tax on Chillies. If that is so, the merchant or the seller will have greater chances of diverting his goods to Maharashtra border areas where he can sell it at a better price with more advantage, because there is no taxation there. There is also the danger of losing that very commodity, namely Chillies in our markets and that may affect even the merchant community also and the State will be losing the sales-tax that it is now getting. We may be deprived of that revenue even Looking at it from this point of view, I feel it is not correct to levy sales-tax on chillies at multi-point.

With regard to the firewood that is consumed for domestic purposes, I feel it is necessary to make an exemption. The exemption may continue. There may be one objection saying that hotel people are likely to misuse any concession given in this behalf.

Sri B. D. JATTI.—For the information of the Hon'ble Member, I can say, the representatives of the Hotel Association came to me and stated that if we levied at single-point, they hed no objection.

Sri GANJI VEERAPPA.—I can suggest with regard to firewood, it can be levied at source at one point. Because, after all the fuel comes from the Government depots. Without the permission of forest depots no fuel can come out. If it is levied at one single-point, I think the State also may get the revenue and the burden of taxation may also be lessened.

There is another point on which I want to give a suggestion to the Government. Sir, I feel I cannot agree with the Finance Minister with what he said with regard to the date on which the Act will have to come into effect, namely 1st April 1962. I am sorry to disagree with the Finance Minister because such a measure cannot be made retrospective Firstly, the sales-tax is a tax which has to be paid

by the man who would have collected from others in the course of transactions. This Bill was not there on 1 t April and obviously the merchants will not have collected tax on all these items we have included in the Bill. On some items, we have enhanced. If we say that this Bill will come into force from 1st April 1962, the effect would be that the merchants will have to be taxed for moneys which they have not collected. Sir, it is not only illegal, but it is not based on any ethics of taxation.

I feel and I earnestly appeal to the Finance Minister that the Act may be made applicable from the day it comes into force and not retrospectively.

I do not find it necessary to go into details. At this stage we can agree with the general principles of the bill. It is not disputed that we want more money to implement the Plan successfully. I appeal to the Leader of the Opposition to be a bit co-operative in his approach to this matter.

I feel that with respect to certain items in the schedule, which are not very essential to the life of the common man, the tax-rate could be enhanced. There are also certain items which could be included. These are matters for the Select Committee to consider. At this stage the House can only lend support to the general principles of the Bill.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ನಗರ-ಉತ್ತರ).—ಮಾನ್ಯ ಅಧ್ಯಕ್ಷರೆ, ಈ ಮೈಸೂರು ವರಾಟ ತೆರಿಗೆಯ ಎರಡನೆಯ ತಿದ್ದುಪಡಿ ಮಸೂದೆಯ ಮೇಲೆ ಮಾತನಾಡುತ್ತಾ ಕೆಲವು ಅಭಿಪ್ರಾಯಗಳನ್ನು ಸೂಚಿಸಲು ಪ್ರಯತ್ನ ಪಡುತ್ತೇನೆ. ಈ ತೆರಿಗೆಯನ್ನು ನೋಡಿದರೆ ಹುಣ್ಣಿನ ಮೇಲೆ ಬರೆ ಎಳೆದ ಹಾಗೆ ಕಾಣುತ್ತದೆ. ಏಕೆಂದರೆ, ಈಗಾಗಲೇ ಜನರು ತೆರಿಗೆಗಳ ಹೊರೆಯನ್ನು ಹೊತ್ತು ಇವನ್ನು ಕೊಡಲಾರದೆ ಸಂಕಟಪಡುವ ಕಾಲದಲ್ಲಿ ಮತ್ತೆ ಇವರ ಮೇಲೆ ಹೊರೆ ಹೊರಿಸುವುದು ಎಂದರೆ, ನಿಜವಾಗಿಯೂ ಯಾರಿಗಾದರೂ ಮನಸ್ಸು ನೋಯುತ್ತದೆ. ಈ ತೆರಿಗೆಯನ್ನು ಹಾಕುವ ಕಾಲದಲ್ಲಿ ಮಾನ್ಯ ಮಂತ್ರಿಗಳು ಈ ಮಸೂದೆಯಲ್ಲಿ ನಮೂದಿಸಿರುವ 13 ಬಾಬುಗಳಲ್ಲಿ ಒಂದೊಂದರ ಮೇಲೂ ತೆರಿಗೆ ಹೆಚ್ಚಿಸಿದರೆ ಎಷ್ಟು ಆದಾಯ ಬರಬಹುದೆಂದು ಹೇಳಿಲ್ಲ. ಜೊತೆಗೆ ಹೊಸದಾಗಿ ತೆರಿಗೆ ಹಾಕಿರುವುದರಿಂದ ಎಷ್ಟು ಹಣ ಬರಬಹುದೆಂದು ಹೇಳಿದ್ದಿದ್ದರೆ ಇಷ್ಟು ಕೋಟಿ ರೂಪಾಯಿ ಉತ್ಪತ್ತಿಯಾಗುತ್ತದೆಂದು ತಕ್ಷಣ ಹೇಳಲು ಅನುಕೂಲವಾಗುತ್ತಿತ್ತು. ಆದರೆ ಬಹಳ ಚತುರತೆಯಿಂದ ಇದನ್ನು ಹೇಳದೆ ಮುಚ್ಚಿದ್ದಾರೆ. ಈ ಅಂಕಿ ಅಂಶಗಳನ್ನು ಹೇಳಿದ್ದರೆ ನಾವು ಇದನ್ನು ಪರಿಶೀಲಿಸಲು ಬಹಳ ಸುಲಭವಾಗುತ್ತಿತ್ತೆಂದು ನನ್ನ ಭಾವನೆ. ಈ ತಿದ್ದುಪಡಿಗಳ ಮೂಲಕ ತೆರಿಗೆ ಹೊರಿಸುವುದನ್ನು ಮಾತ್ರ ಹೇಳಿದ್ದಾರೆ. ನೆರೆ ರಾಜ್ಯಗಳಲ್ಲಿರುವ ತೆರಿಗೆ ದರಗಳ ಶೇಕಡಾ ವಾರನ್ನು ಹೇಳಿದ್ದಾರೆ. ಆದರೆ ಆ ರಾಜ್ಯಗಳಲ್ಲಿ ಯಾವ ಯಾವುದಕ್ಕೆ ರಿಯಾಯಿತಿಗಳಿವೆಯೆಂಬುದನ್ನು ಹೇಳಿದ್ದರೆ ಬಹಳ ಅನುಕೂಲವಾಗುತ್ತಿತ್ತು ಎಂದು ಒತ್ತಿ ಹೇಳುತ್ತೇನೆ. ಒಂದು ದೃಷ್ಟಿಯಲ್ಲಿ ಹೇಳುವುದಾದರೆ, ನಮ್ಮ ನೆರೆಯ ಮದರಾಸು ಪ್ರಾಂತದಲ್ಲಿ ಹೇಗಿದೆಯೆಂದರೆ, ನಮ್ಮಲ್ಲಿ ಏಳೂವರೆ ಸಾವಿರದ ಮೇಲೆ ವ್ಯಾಪಾರ ಮಾಡುವವರಿಗೆ ತೆರಿಗೆ ಹಾಕಿದರೆ, ಅಲ್ಲಿ ಹದಿನೈದು ಸಾವಿರಕ್ಕೆ ಮೇಲೆ ವ್ಯಾಪಾರ ಮಾಡುವವರಿಗೆ ಹಾಕಿದ್ದಾರೆ. ಅದರಿಂದ ಬಡವರಿಗೆ ಅನುಕೂಲವಾಗುತ್ತದೆ. ಕೇವಲ ಒಂದು ಬೀಡಿ ಅಂಗಡಿಯನ್ನಿಟ್ಟುಕೊಂಡು ವ್ಯಾಪಾರ ಮಾಡುವ ಮನುಷ್ಯ ಕೂಡ ತೆರಿಗೆಯನ್ನು ಕೊಡಬೇಕೆಂದರೆ ಬಹಳ ತೊಂದರೆಯಾಗುತ್ತದೆ. ಬಡವರಿಗೆ ಸರ್ಕಾರ ಅನುಕೂಲ ಮಾಡಿಕೊಡಬೇಕೆಂದು ಒತ್ತಿ ಹೇಳುತ್ತಿದ್ದೇನೆ.

ಈ ತಿದ್ದುಪಡಿಯಿಂದ ಒಂದೂವರೆ ಕೋಟಿ ರೂಪಾಯಿ ಹೆಚ್ಚು ಆದಾಯ ಬರಬಹುದೆಂದು ಅಂದಾಜು ಮಾಡಿದ್ದಾರೆ. ಆದರೆ ಮೂರು ನಾಲ್ಕು ಕೋಟಿ ರೂಪಾಯಿಗಳಿಗೆ ಕಡಮೆ ಬರುವುದಿಲ್ಲವೆಂದು ನಾನಾದರೂ ಭಾವಿಸುತ್ತೇನೆ. ಕೆಲವು ಬಾಬುಗಳ ಮೇಲೆ ಶೇಕಡ 4 ಇದ್ದುದು 6 ಮಾಡಿದ್ದಾರೆ, ಮತ್ತೆ ಕೆಲವಕ್ಕೆ ಶೇಕಡ 4 ಇದ್ದುದನ್ನು 8 ಮಾಡಿದ್ದಾರೆ, ಇನ್ನು ಕೆಲವಕ್ಕೆ ಶೇಕಡ 1 ಇದ್ದುದನ್ನು ಶೇಕಡ 3 ರಷ್ಟು ಹೆಚ್ಚು ಮಾಡಿದ್ದಾರೆ. ಹೀಗೆ ಒಂದಕ್ಕೆ ಎರಡರಷ್ಟು, ಮೂರರಷ್ಟು ಮಾಡಿರುವುದರಿಂದ ಖಂಡಿತವಾಗಿಯೂ ಜಾಸ್ತಿ ಹಣ ಬರುತ್ತದೆ. ಸರ್ಕಾರ ಅಂದಾಜು ಮಾಡಿರುವುದು ಬಹಳ ಕಡಮೆ. ಈ ರೀತಿ ತೆರಿಗೆ ಹಾಕುತ್ತಾ ಹೋದರೆ ನಿಜವಾಗಿಯೂ ವರ್ತಕರಿಗೆ ಗಾಬರಿಯಾಗಿ, ನ್ಯಾಯವಾಗಿ ಲೆಕ್ಕಗಳನ್ನಿಟ್ಟು ವ್ಯಾಪಾರ ಮಾಡುವ ವರ್ತಕರಿಗೆ ತೊಂದರೆಯಾಗುತ್ತದೆ. ಮತ್ತೆ ಕೆಲವರಿಗೆ ಹತ್ತರಷ್ಟು ತೆರಿಗೆ ಹಾಕಿದರೂ ಅದು ಲೆಕ್ಕಕ್ಕೆ ಬರದೆ ಬೇರೆ ಕಡೆ ಹೊರಟು ಹೋಗುತ್ತದೆ. ಹೀಗೆ ನ್ಯಾಯವಾಗಿ ವ್ಯಾಪಾರ ಮಾಡುವ ವರ್ತಕರಿಗೆ ತೊಂದರೆಯಾಗಿ ಲೆಕ್ಕ ಸಿಕ್ಕದೇ ಯಿರುವಂತೆ ವ್ಯಾಪಾರ ಮಾಡುವವರಿಗೆ ಅನುಕೂಲವಾಗುತ್ತದೆ. ಸರ್ಕಾರಕ್ಕೆ ಮೂರು ಕೋಟಿ ರೂಪಾಯಿ ಆದಾಯ ಬರುವುದು ಒಂದೂವರೆ ಕೋಟಿ ಬರುವುದಕ್ಕವಕಾಶವಾಗುತ್ತದೆ. ಒಳಗೇ ವ್ಯಾಪಾರ ಮಾಡುವವರಿಗೆ ಅನುಕೂಲವಾಗುತ್ತದೆ.

ಸ್ವಾಮಿ, ಆಹಾರ ಪದಾರ್ಥಗಳಿಗೆ ತೆರಿಗೆ ಹಾಕಿರುವುದನ್ನು ನೋಡಿದರೆ, ದೇಶದಲ್ಲಿ ಜನರು ಈಗಾಗಲೇ ತಲೆಗೆ 80-85 ರೂಪಾಯಿ ತೆರಿಗೆ ಕೊಡುತ್ತಿದ್ದಾರೆ. ನಿತ್ಯ ಬಳಕೆಯ ಆಹಾರ ಪದಾರ್ಥಗಳಿಗೆ ತೆರಿಗೆ ಹಾಕುವುದಾದರೆ, ಇದರಿಂದ ಈ ತೆರಿಗೆ ತಲೆಗೆ 5 ರಿಂದ 7 ರೂಪಾಯಿಗಳವರೆಗೆ ಹೆಚ್ಚಾಗುತ್ತದೆ. ನಮ್ಮ ದೇಶದ ತಲಾ ಆದಾಯ 2?7 ರೂಪಾಯಿ ಎನ್ನುವುದು ಗೊತ್ತಿದೆ. ಈಗಿರುವ 85 ರೂಪಾಯಿ ತೆರಿಗೆಯ ಜೊತೆಗೆ ಇನ್ನು ಆರೇಳು ರೂಪಾಯಿ ಜಾಸ್ತಿಯಾದರೆ, 92 ರೂಪಾಯಿವರೆಗೆ ತೆರಿಗೆಗೆ ಹೋದರೆ ಇನ್ನು ಮಿಕ್ಕ ಹಣದಲ್ಲಿ ಜೀವನ ಮಾಡುವುದಕ್ಕಾಗುತ್ತದೆಯೆ ಎಂಬುದನ್ನು ಯೋಚನೆ ಮಾಡಬೇಕು. ಹಣವಂತರ ಮೇಲೆ ತೆರಿಗೆ ಹಾಕುವುದರಲ್ಲಿ ನಮ್ಮ ಭಿನ್ನಾಭಿಪ್ರಾಯವಿಲ್ಲ, ಆದರೆ ಇದು ಬಡವರ ಮೇಲೆ ಬೀಳುತ್ತದೆ. ವರ್ತಕರಿಗೆ ಬೇರೆ ರೀತಿ ಅನುಕೂಲವಾಗುತ್ತದೆ. ಲೆಕ್ಕ ಸರಿಯಾಗಿ ಇಡದೇಯಿರುವವರಿಗೆ

(ಶ್ರೀ ಬಿ. ಕೆ. ಪುಟ್ಟಯ್ಯ)

ಅನುಕೂಲವಾಗಿ ನ್ಯಾಯವಾಗಿ ನಡೆದುಕೊಳ್ಳುವವರಿಗೂ ಬಡವರಿಗೂ ತೊಂದರೆಯಾಗುತ್ತದೆ. ಆದುದರಿಂದ ಈ ರೀತಿ ತೆರಿಗೆಯನ್ನು ತಂದಿರುವುದು ಬಹಳ ಅನ್ಯಾಯ. ಆಲೋಚನೆ ಮಾಡಿ, ಒಂದೊಂದು ಬಾಬಿಗೂ ಎಷ್ಟು ಮಟ್ಟಿಗೆ ಹೆಚ್ಚಿಸಬಹುದೊ ಅಷ್ಟು ಮಟ್ಟಿಗೆ ಮಾತ್ರ ಹೆಚ್ಚಿಸಿದರೆ ನಿಜವಾಗಿ ಅಷ್ಟು ಹೊರೆ ಜನರ ಮೇಲೆ ಬೀಳುವುದಿಲ್ಲ. ಆದರೆ ಈ ರೀತಿ ಒಂದಕ್ಕೆ ಎರಡು ಮೂರರಷ್ಟು ಹೆಚ್ಚು ಮಾಡಿದರೆ, ಖಂಡಿತವಾಗಿಯೂ ಜನರು ಸರ್ಕಾರದ ಜೊತೆಗಿರುವುದಿಲ್ಲ, ಬಯ್ಯುತ್ತಾರೆ. ಶ್ರೀಮಾನ್ ಜತ್ತಿಯವರನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಇಷ್ಟು ಹೊಟ್ಟೆಯನ್ನು ಎಲ್ಲಿ ತಂದರೆಂದು ಆಶ್ಚರ್ಯವಾಗುತ್ತದೆ. ನೋಡುವುದಕ್ಕೆ ಸಣ್ಣದಾಗಿದ್ದರೂ ಭೀಮನಂಥ ಬಲವನ್ನು ಹೊಂದಿದ್ದಾರೆ, ಹೊಟ್ಟೆ ಬಾಕರ ಹಾಗೆ......

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಭೀಮನ ಹಾಗಲ್ಲ, ಬಕಾಸುರನ ಹಾಗೆ (ನಗು !)

ಶ್ರೀ ಬಿ. ಕೆ. ಪುಟ್ಟಯ್ಯ.—ಸ್ವಾಮಿ, ಆಡಳಿತದಲ್ಲಿ ಬಹಳ ಅನುಭವವುಳ್ಳವರು ಇವರು, ಈಗಾಗಲೇ ಒಂದಕ್ಕೆರಡರಷ್ಟು ತೆರಿಗೆಯಾಗಿದೆ. ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ಒಂದಕ್ಕೆ ಎರಡು ಮೂರರಷ್ಟು ತೆರಿಗೆಗಳು ಹೆಚ್ಚಿವೆ. ಅವರು ಅನುಭವವುಳ್ಳವರು, ಹಿಡಿತದಿಂದ ಆಡಳಿತ ಮಾಡಬಹುದೆಂದು ಭಾವಿಸಿದ್ದೆವು. ಆದರೆ ಇವರ ಕಾಲದಲ್ಲಿ ಇನ್ನೂ ಹೆಚ್ಚಿನ ತೆರಿಗೆ ಹೇರಿದರೆ, ಇವರು ಚತುರರೆಂದು ತಿಳಿದುಕೊಂಡಿರುವ ಜನರು ಬೇರೆ ಅಭಿಪ್ರಾಯ ಹೊಂದುತ್ತಾರೆ.

ಸ್ವಾಮಿ, ನಮ್ಮ ಸಂಸ್ಥಾನದ ಆದಾಯ ಬಾಬುಗಳು ನಿಜವಾಗಿಯೂ ಕರೆಯುವ ಹಸುಗಳಿದ್ದಹಾಗೆ. ನೀವು ಹೇಳಲಿ ಹೇಳದಿರಲಿ, ನೀವು ಹೆಚ್ಚಿಗೆ ಮಾಡಲಿ, ಮಾಡದಿರಲಿ, ಅಂತೂ ಇಂತೂ 5-6 ಕೋಟಿ ರೂಪಾಯಿಗಳು ಹೆಚ್ಚಾಗಿಯೇ ತಂದು ಕೊಡುತ್ತವೆ. ಆದ್ದರಿಂದ ನೀವೀಗ ಯಾವ ತೆರಿಗೆಯನ್ನು ಹಾಕದೆ ಇದ್ದರೂ ನಮಗೆ 105 ಕೋಟಿ ರೂಪಾಯಿಗಳು ಬಂದೇ ಬರುತ್ತವೆ.

ಶ್ರೀ ಜೆ. ಎಚ್. ಷಂಷುದ್ದೀನ್.-ಯಾವ ಗ್ಯಾರಂಟಿ? ಬ್ಯಾಂಕ್ ಗ್ಯಾರಂಟಿಯೋ ಅಥವಾ ಸಿಂಪಲ್ ಗ್ಯಾರಂಟಿಯೋ

ಶ್ರೀ ಬಿ. ಕೆ. ಪುಟ್ಟಯ್ಯ.— ರೈತನೇ ಗ್ಯಾರಂಟಿ. ಜನರೇ ಗ್ಯಾರಂಟಿ. ತಮಗೆ ಹೆಚ್ಚಿಗೆ ತಾವಾಗಿಯೇ ತಂದುಕೊಡುತ್ತಾರೆ. ತಾವೀಗ ಏನು ನಿರೀಕ್ಷಣೆ ಮಾಡಿದ್ದಿರೋ ಅದಕ್ಕಿಂತಲೂ ಅನೇಕ ಕೋಟಿ ರೂಪಾಯಿಗಳಷ್ಟು ಹೆಚ್ಚಿಗೆ ಬರುತ್ತಿರುವುದನ್ನು ನಾವು ಈಗ ಹತ್ತಾರು ವರ್ಷಗಳಿಂದ ನೋಡುತ್ತಿದ್ದೇವೆ. ನಿಮ್ಮ ಅಂದಾಜಿಗೆ ಎಂದೂ ಕಡಮೆಯಾಗಿಲ್ಲ. ಆಡಳಿತ ವರ್ಗದವರೇನೋ ಈ ರೀತಿ ಹೇಳುವುದು ಸಹಜ. ಆದರೆ ಜನತೆ ಅದರ ಕಡೆ ನೋಡದೆ ಹೆಚ್ಚಿಗೆ ಕೊಡುತ್ತಿದೆ. ಅದರಂತೆ ನಾವೀಗ 99 ಕೋಟಿ ರೂಪಾಯಿಗಳು ಬರಬಹುದೆಂದು ಅಂದಾಜು ಮಾಡಿರುವುದು 105 ಕೋಟಿ ರೂಪಾಯಿಗಳವರೆಗೂ ಹೆಚ್ಚುತ್ತದೆಂಬುದರಲ್ಲಿ ಏನೂ ಅನುಮಾನ ಪಡಬೇಕಾಗಿಲ್ಲ. ಆದ್ದರಿಂದ ನೀವೀಗ ಈ ತೆರಿಗೆ ಹಾಕುವುದರಲ್ಲಿ ಯಾವ್ಯಾವುದಕ್ಕೆ ಹೆಚ್ಚಿಗೆ ಮಾಡಬಹುದು, ಎಷ್ಟು ಮಟ್ಟಿಗೆ ಹೆಚ್ಚಿಗೆ ಮಾಡಬಹುದು, ಎಷ್ಟು ಹಾಕಿದರೆ ಜನ ಕೊಡಬಲ್ಲರು ಎಂಬದನ್ನು ಸ್ವಲ್ಪ ಯೋಚನೆ ಮಾಡಿ ಮುಂದುವರಿಯಿರಿ. ತಮಗೂ ಅಗ್ಗೆ ಒಳ್ಳೆಯ ಹೆಸರು ಬರುತ್ತದೆ, ಜನರೂ ನಿಮ್ಮೊಡನೆ ಸಹಕರಿಸುತ್ತಾರೆ. ತಾವೂ ದೇಶಕ್ಕಾಗಿ ದುಡಿಯುತ್ತಿದ್ದೀರೆಂದು ತೋರಿಸಿದಂತಾಗುತ್ತದೆ. ಅದು ಬಿಟ್ಟು 4% ಇರುವುದನ್ನು 10% ಮಾಡುವುದು ಎಂದರೆ, ಜನರು ಶಪಿಸಿಕೊಂಡು ಕೊಡುತ್ತಾರೆ. ಅವರ ಶಾಪ ತಮಗೆ ತಟ್ಟುತ್ತದೆ. ಆ ಶಾಪಕ್ಕೆ ತಾವು ಒಳಗಾಗಬೇಡಿ.

ಇದಲ್ಲದೆ ತಾವೀಗ ಮಲ್ಟಿಪಾಯಿಂಟ್ ಹಾಕುವುದನ್ನು ಇಲ್ಲಿ ತಂದಿದ್ದೀರಿ. ವರ್ತಕರು ಅನುಭವಿಸುವ ಕಷ್ಟವನ್ನು ಅರಿತು ನಾನೀಗ ಹೇಳುತ್ತೇನೆ. ನೀವು ಒಂದು ಪರ್ಸೆಂಟಲ್ಲ, ನಾಲ್ಕು ಪರ್ಸೆಂಟ್ ಬೇಕಾದರೂ ಹಾಕಿ, ಮಲ್ಟಿಪಾಯಿಂಟ್ ಮಾತ್ರ ಹಾಕಬೇಡಿ. ಇದು ಬಹಳ ಕಿರುಕುಳ ಕೊಡುತ್ತದೆ. ಮಾನ್ಯ ಸದಸ್ಯರಾದ ಗಾಂಜಿ ವೀರಪ್ಪನವರು ಹೇಳಿದಹಾಗೆ ಇದರಿಂದ ಹೊರಲಾರದ ಹೊರೆಯನ್ನು ಹೊರಬೇಕಾಗಿ ಬರುತ್ತದೆ. ಎಷ್ಟು ಮಾಡಿದರೂ ಆಫೀಸರುಗಳಿಗೆ ಜವಾಬು ಹೇಳುವುದು ಕಷ್ಟವಾಗುತ್ತದೆ. ಆದ್ದರಿಂದ ಏನು ಹಾಕುವುದಿದ್ದರೂ ಒಂದುಕಡೆ ಹಾಕಿ. ಆದ್ದರಿಂದ ಮಲ್ಟಿಪಾಯಿಂಟ್ ತೆರಿಗೆ ವಿಧಿಸುವುದರಲ್ಲಿ ದಯವಿಟ್ಟು ನಾವು ಹೇಳುವುದನ್ನು ಆಲೋಚನೆಮಾಡಿ ಅದನ್ನು ಬಿಟ್ಟುಬಿಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಆಮೇಲೆ ಹೊಸದಾಗಿ ಕೆಲವು ಸಾಮಾನುಗಳಮೇಲೆ ತೆರಿಗೆ ಹಾಕಿದ್ದೀರಿ. ಮೆಣಸಿನಕಾಯಿ ಅಂಥವುಗಳಲ್ಲೊಂದು. ಇದು ನಿಜವಾಗಿಯೂ ಬಹಳ ಕಷ್ಟ ಕೊಡುತ್ತದೆ. ಬಹಳ ಖಾರದ ಪದಾರ್ಥ. ಇಂಥ ಖಾರದೊಡನೆ ನೀವೇಕೆ ಹೋರಾಡುತ್ತೀರೋ ಗೊತ್ತಿಲ್ಲ. ಅಲ್ಲದೆ ಇದು ಹೊರ ದೇಶಕ್ಕೆ ರಫ್ತಾಗುವ ಪದಾರ್ಥ. ಮೆಣಸಿನ ಪುಡಿಯನ್ನು ಹೊರಗೆ ಕಳುಹಿಸಿಕೊಡುತ್ತಾರೆ. ಈ ರೀತಿ ಡಾಲರ್ ತರುವ ಪದಾರ್ಥದಮೇಲೆ ಯಾವರೀತಿ ಟ್ಯಾಕ್ಸ್ ಹಾಕಬೇಕೆಂಬುದನ್ನು ಸ್ವಲ್ಪ ಆಲೋಚನೆಮಾಡಿ ಮಾಡಬೇಕು.

ಮರಕ್ಕೆ 4% ಇರುವಲ್ಲಿ, ಮಲ್ಟಿಪಾಯಿಂಟ್‌ಮಾಡಿ 2%ಮಾಡಿದ್ದೀರಿ. ಇದರಿಂದ ಇನ್ನಷ್ಟು ಅನರ್ಥವಾಗುತ್ತದೆ ಅಷ್ಟೆ. ತಮಗೆ ಫಾರೆಸ್ಟ್ ಇಲಾಖೆಯಲ್ಲಿ ಎಲ್ಲಾ ಲೆಕ್ಕಗಳೂ ನಿಖರವಾಗಿ ಸಿಕ್ಕುತ್ತವೆ. ಹೀಗಿದ್ದರೂ ಮಲ್ಟಿಪಾಯಿಂಟ್‌ಮಾಡಿ ಕೈಕೈ ಬದಲಾವಣೆಗೂ ತೆರಿಗೆ ಹಾಕುವುದು ವಿಪರೀತ ಕಷ್ಟಕ್ಕೀಡು ಮಾಡುತ್ತದೆ. ಇಷ್ಟೆಲ್ಲಾ ತೊಂದರೆಗಳನ್ನೇಕೆ ಜನತೆಗೆ ಕೊಡುತ್ತೀರಿ? ನಿಮಗೆ ಬೇಕಾಗಿರುವುದೆಲ್ಲಾ ಮೂರು ಕೋಟಿ ರೂಪಾಯಿಗಳು. ನಿನ್ನೆ ಮೊನ್ನೆ ಪಾಸು ಮಾಡಿರುವ ಬಿಲ್ಲುಗಳಿಂದಲೇ ಅಷ್ಟು ಬಂದುಬಿಡುತ್ತದೆ. ಆದ್ದರಿಂದ ಮೂರು ಕೋಟಿ ರೂಪಾಯಿಗಳು ಬೇಕೆಂದು ಹೇಳಿ 8 ಕೋಟಿ ರೂಪಾಯಿಗಳಿಗೆ ಕೈ ಹಾಕುವುದೇಕೆ? ನೀವೀಗ ತಂದಿರುವ ಬಿಲ್ಲುಗಳನ್ನೆಲ್ಲಾ ನೋಡಿದರೆ 42 ಕೋಟಿ ರೂಪಾಯಿಗಳ ಯೋಜನೆಯ ಹಣವನ್ನೂ ಒಂದೇ ವರ್ಷಕ್ಕೆ ತೆಗೆದುಬಿಡುವಂತೆ ಕಾಣುತ್ತೆ.

ಈ ಅಂಶಗಳನ್ನೆಲ್ಲಾ ಪರ್ಯಾಲೋಚಿಸಿ ಸೆಲೆಕ್ಟ್ ಕಮಿಟಿಯಲ್ಲಿ ಅದಕ್ಕೆ ತೀವ್ರ ಗಮನ ಕೊಟ್ಟು, ಮಸೂದೆ ತಯಾರಾಗುವುದು ಸ್ವಲ್ಪ ನಿಧಾನವಾದರೂ ಚಿಂತೆಯಿಲ್ಲ, ಸುದೀರ್ಘವಾಗಿ ಯಾರಿಗೆ ಎಷ್ಟು ಹಾಕಬೇಕೆಂಬದನ್ನು ವಿಮರ್ಶೆ ಮಾಡಿ ವಿಧಾಯಕ ಮಾಡಬೇಕೆಂದು ನಾನು ಹೇಳುತ್ತೇನೆ.

† Sri V. S. PATIL (Belgaum).—I rise to oppose this measure in its entirety as it proposes to tax the necessities of life and does not contain any provisions by which evasion of taxes can be plugged. We all know that sales tax has become a boon to the merchant community. Since the introduction of this tax the merchants are more benefited than the Government itself. If a serious attempt is made by the Government to find out what exactly is recovered from the consumers or sellers of goods, they will find that much more amount than the recoveries made by the Government are being taxed by these people and all their firms', establishments and other expenses of the merchant class are paid out of the sales tax. They contribute something for the election of the Congress party; that is a different matter, because that issue is not before us now. The people are made to pay tax both for purchasing and selling and the whole amount not credited to Government. To remedy this defect it is absolutely necessary to have a suitable provision. But no provision is found in the Act or in the proposed Bill. I should like to submit that the Hon'ble Finance Minister must pay his attention to this fact. The huge amounts of appropriations or misappropriations by the merchant class must be stopped and some stringent measures must be incorporated in the Bill so that every pie paid by the seller or purchaser is credited to the treasury. If that is done I feel many other taxation measures will not be necessary. Our friend Sri G. Veerappa said that the Bill should not have retrospective effect because the merchants have not recovered tax from 1st April 1962. His only anxiety appears to be that the Government is not recovering directly from the concerned persons but are recovering through the merchants. If the agents are displeased it is likely to affect the future collections also. That is why it appears he wants to see that retrospective effect to this measure is not given. I am really against giving any retrospective effect to any such Bills. But at the same time we have to see whether our agents, that is, merchants will be really sufferers. I am sure the merchant class which is flourishing need not be given any scope for further amassing the wealth in the name of this particular Act.

The second point which I would like to bring to the notice of the Government is that we are taxing the essential commodities, especially food grains, cereals, etc., and we must think twice before doing so. We all know that we have to import food-grains from abroad. Our agricultural production has not come up to the standard which we had expected. Even by paying huge amounts every year, we have to import foodgrains. There is absolutely no measure on the statute book of our country to put a check to the mouths that are coming up every year, every day and every minute. Instead of having such measures, I should like to propose that every birth of a child should be taxed.

(*Interruption.*)

5-30 P.M.

Because it has become a great menace, according to experts, to feed all this growing population in our country.

(*Interruption.*)

What is the use of mere preaching? They must be taxed heavily and penalised.

An HON'BLE MEMBER.—Murder them;

Sri V. S. PATIL.—Murdering is a different matter. So, instead of taxing the foodgrains, you fix the number that a couple should have two or three children at the most

(*Laughter*)

Sri J. H. SHAMSUDDIN (Deputy Minister for Finance).—If the Hon'ble Member yields, will he give the incidence of this taxation if it is accepted?

Sri C. J. MUCKANNAPPA.—He has got 15 children, and is afraid he will have to pay heavy taxes.

(*Laughter*)

Sri J. H. SHAMSUDDIN.—I am prepared to pay the tax. But let him tell us the incidence of this taxation.

Sri C. J. MUCKANNAPPA.—More number of children—it may be due to the fact that in his community, they can have four wives at a time.

Sri J. H. SHAMSUDDIN.—My friend has not realised the implication. It is in the poorer section of the people that the birth rate is more and if such a tax is levied, it is the poorer section that has to suffer. He has not realised that. Therefore, he is speaking contrary to his views.

Sri C. J. MUCKANNAPPA.—People, after getting rich, also get more children

Sri V. S. PATIL.—So far as this problem of population is concerned, we have very bad results even by importing foodgrains from abroad. We have some instances of foreign foodgrains turning out to be poisonous and several people killed by consuming those foodgrains. That is why I suggest that to increase local foodgrains, it is not congenial to tax especially foodgrains, cereals, etc.

There is another thing which I should like to suggest. As the matter is going to be referred to a Select Committee, it may take into consideration various items that have been enumerated here in the Statement of Objects and Reasons. So many commodities have been mentioned there and especially firewood and charcoal. I think the Hon'ble Members of the Resources and Economy Committee have been aware of the abnormal rise in prices of charcoal and firewood. This commodity, which is quite essential, has become scarce throughout the whole of the State—not only this State but in the whole of the country. Year by year, firewood is being cut from forests and year by year forests are being reduced and it is becoming a great problem. So, this question of taxing firewood and charcoal will hit hard everybody, just like the salt tax. Every person has to use salt and that was why the tax on salt was removed. Cereals, firewood and charcoal stand on the same analogy. A tax on these commodities means hitting the poorest classes. So far as the rich people are concerned. Most of them might not be using firewood and charcoal and they may be using electricity for that purpose. So I submit, Sir, that these items that are quite essential for the living of poor persons or poor families must be exempted from the purview of this Act.

Sri B. V. MAGAVI (Haveri).—Sir, while supporting the Mysore Sales Tax (Second Amendment) Bill, 1962, I have a few observations to make. Many of the Opposition members have opposed tax measure tooth and nail, but they have failed to understand that taxation is inevitable under inflationary econmy. Moreover, some of them have said that it contains an inflationary tendency, but I would like to say that an inflationary tendency is a sign of healthy economy than deflationary or depressionary. As a student of economics I know that much.

(*Interruption*)

As suggested by Sri Muckannappa if there is depression or deflationary economy, there would have been a lot of unemployment in our country and the poor people would have suffered much more than what they are suffering today.

(*Interruption*)

Another thing is, some members have said that this taxation is on the poorer classes only. But generally we know that this salestax has some incidence on the merchant class also. In a competitive economy, business people have to sell their goods at a lower rate and many a time, the salestax is borne by them without collecting the same from the consumer, thus reducing profits.

One thing I would like to bring to the notice of the House, and that is regarding evasion of tax. As

I have said, while speaking on Demands last time, evasion is still much more in our country, rather in our State. In my opinion, Government is not collecting more than forty percent of the taxes. It is therefore more important to find where this real tax evasion is than merely increasing the percentage of taxes. Some have said that the only method of finding out or stopping it, is by putting a single point tax. By single point, I mean, the tax should be put at the source of production or at the source of supply as the Central Government is doing. They are imposing excise duty at the source of production. We should also try to change by putting at the source of production or supply.

The Hon'ble Finance Minister has given comparative figures while raising the taxation percentages. But he did not give one comparative figure, *i. e.* the rate of taxation in the State of Maharashtra. The turnover for registration in Maharashtra is Rs. 25,000 whereas in our State it is Rs. 7,500. This limit is very low and it practically iucludes every hawker. How many of the hawkers are registered dealers ? It means that there is so much of tax evasion in our State and so many people are left untaxed. I would earnestly appeal to Government to consider raising the turnover limit for registration as dealer to Rs. 50,000 so that there could be some economy in the administration of this tax. At present the A. C. T. O.s are concentrating their attention on the petty merchants and their collection is consquently very low. Many of these officers are not collecting more than Rs. 60,000 whereas the expenditure on each one of these officers is as much as Rs. 40,000. It will thus be seen that the collection charges come to about 60% of the tax collected. So I appeal to Government as a first measure to increase the turnover limit for registration as dealer to Rs. 50,000 which will lead to economy in collection.

Under the new proposal Government have imposed tax on soda water. The soda water manufacturing people are mere hawkers. How can they maintain and submit proper accounts ?

ಶ್ರೀ ಕೆ. ಪಿ. ಗದಗ್.—ಯಾರ ವಾರ್ಷಿಕ ವ್ಯಾಪಾರ 7,500 ಕ್ಕೆ ಮೇಲ್ಪಟ್ಟಿರುತ್ತದೆ ಅವರೆಲ್ಲರೂ tax ಕೊಡಬೇಕು. ಅದಕ್ಕೆ ಕೆಳಗೆ ಇದ್ದರೆ ಕೊಡಬೇಕಾಗಿಲ್ಲ. ಮಾನ್ಯ ಸದಸ್ಯರು ಸ್ವಲ್ಪ clarify ಮಾಡಬೇಕು.

Sri B. V. MAGAVI.—What do you think is the daily turnover of a panwala ? He must be selling goods worth at least Rs. 20 per day and that would come to Rs. 7,500 per year. A soda water dealer would be selling goods worth Rs. 20 per day and how do you expect him to maintain proper accounts? I think it would have been wiser to levy tax on the gas cylinder rather than on soda water. You can levy a tax of Rs. 8 or 10 per cylinder and in that way you could get good revenue.

I would appeal to Government to change the taxation method and to levy this tax at the point of production or distribution as that would reduce the harassment meted out to the petty merchants. I hear that today the petty merchants have gone on strike against the provisions of this Bill. Their main grievance is that the assessing authorities are not doing their work properly and judiciously. The merchants are put to a lot of harassment at their hands. They are in the habit of dragging the poor merchants to court by issuing summons and warrants against them. These petty merchants get such a low income that they cannot afford to keep a clerk to maintain their accounts in the prescribed form to the satisfaction of the assesing authorities. As regards the big merchants they can maintain their accounts in the prescribed form properly and submit to the Department and there is no difficulty for them because they have got a huge establishment.

Lastly I would again request Government to collect this tax at the point of production and the point of distribution.

Sri G. V. GOWDA (Palya).—Sir, I stand to support the points made out by the other side except one point. I also believe that the suggestions made from this side of the House are also worthy of consideration by the Finance Minister. Since 1957 when we adopted

(SRI G V. GOWDA)

the Mysore Sales Tax Act on several occasions we have amended the Act to rectify the mistakes found out in the implementation of the Act and also those pointed out by the Tribunal and the High Court. When those amendments were made there were representations from merchants and others for simplication of the procedure for collection of tax. I fail to understand why the Government have not paid any attention to this inasmuch as no steps have been taken to simplify the law of sales tax and procedure. The amendment now before the House is based on a different footing. Not only do they want to raise the rate of tax but they also want to levy this tax on commodities which were not taxed before. Even the A. G. R. Committee have pointed out that there is need to simplify the sales tax law and procedure. At the same time they have said that the difficulties arise mainly on account of the frequent changes in tax laws and increase in the tax rates. They have also suggested certain increase in the rate of tax on certain commodities. Whatever be the justification of Government in increasing the rates under the guise of augmenting the resources for the plan schemes, my submission as pointed out also by Sri Ganji Veerappa is that the liability of this tax has been equally distributed among all people. This is the only tax law which affects all the 240 lakhs of people because we are now taxing almost all commodities, essential commodities including charcoal and firewood. This is the distinction between the sales tax law and other tax laws. So this is a tax law which affects the bulk of the population in the State who are poor. This point has to be borne in mind while suggesting any increase in the tax. Because the Maharashtra Government has imposed multi-point tax, that does not mean that we should also copy that system here. My friend Sri Magavi said that inflationary tendency in a developing economy is a healthy sign. I do not know in which Economics book that thing is found. Though I am not a student of economics myself, I could say that that may be true for some time in a developing economy, but we must know that we are passing through this phase ever since 1952 for the last 10 years. If this tendency continues even after ten years, I am afraid it is not a healthy sign. Especially we know that the prices of foodgrains are increasing. In fact, it is the bounden duty of Government to see that the basic necessities of life are provided to the people of the State. In this connection, I may quote the observations made by the Ramachandra Rao Committee in regard to this matter.

> "Food, cloth and shelter being the primary requisites of life, continued food shortage, decline in cloth production and lack of housing facilities in the country is a measure of the deficiencies and shortcomings of the plans which are still to be made up."

Such being the case, are we justified in increasing the levy so far as foodgrains and basic necessities of life are concerned? This is a matter which ought to weigh with the Government when they propose to tax these new commodities. The very fact that these commodities were exempted under the parent Act shows that the legislature did not intend then that they should be taxed at any time in the future. It was said that the licence fee could also be treated as tax and therefore licence fee has been removed by omitting section 6. When you remove the lience fee steps ought to have been taken to increase the registration fee, because it has to be paid by the dealer who does business and earns profits. From a dealer having two lakhs worth of turnover Government should not be satisfied with a registration fee of Rs. 6 only after doing away with the licence fee. The commission agents and brokers are not liable to pay any tax though they are earning huge amonnts. The merchants are only collecting agents; they are not paying anything out of their profits. They only collect from the consumers and pay to the Government. That being the case, there is no reason why the registration fee should not be enhanced. Section

11 of the Act provides that every person who for an agreed commission or brokerage buys or sells on behalf of known principals specified in his accounts in respect of each transaction shall obtain a licence from the assessing authority concerned on payment of such fee not exceeding fifty rupees as may be prescribed in that behalf. Even this licence fee the commission agent or broker is not paying from his pocket. Virtually they are not made to pay for the business they do. Therefore, I am suggesting that the licence fee may be increased.

Sri B. V. MAGAVI.—In competitive business it is practical knowledge that when we go to the market to purchase a particular thing for Rs. 2 and when the dealer wants to levy sales tax on that, we say, " I am not going to pay more than Rs. 2 because the next dealer sells it at Rs. 2 " In that case, the other dealer pays the tax himself from his profits.

Sri G. V. GOWDA.—The persons who collect sales-tax are in an advantageous position. They take advantage of this tax and make profits for themselves.

Sri B. V. MAGAVI.—What I said was that the merchant bears the tax himself with the result that his profits are reduced. He gives the tax from his profits.

Sri G. V. GOWDA.—If that is the result of the working of this Act, everyone of us would welcome this Act. That is not the spirit with which this Act has been framed. Supposing tax is levied on a commodity at single point and a merchant purchases it from the grower. He does not give the grower the actual selling price. If the selling price is Rs. 100, he will give him only Rs. 98 after deducting Rs. 2. When he sells it to another man, he collects the sales tax on Rs. 2 also. The Sales tax on Rs. 98 he collects from the buyer and pays to the Government. Of course, there are good merchants also.

Sri K. P. GADAG.—Sir, somehow or other indirectly it falls upon the producer or the consumer. The higher the licence fee or the registration fee or whatever it may be, the more will be the burden upon either the producer or the consumer. Therefore, even if you raise this licence fee, in one way or the other it will fall upon the producer or the consumer.

Sri G. V. GOWDA.—That is what happens in actual practice. The lawyers have to pay Rs. 500 before they enrol themselves. Similarly, why should not the merchants or the dealers pay this tax from their pockets ?

Sri B. V. MAGAVI.—The lawyer pays it once in his life time whereas the business man pays it every time.

Sri G. V. GOWDA.—What Sri Gadag has said happens in actual practice. The registration fee or the fee that the dealers have to pay should not fall on the consumers because it is not a thing which the consumers are purchasing. It is a fee for carrying on the business and the business man must be required to pay something to the State. That is the step that Government should take.

Mr. DEPUTY SPEAKER.—I hope the Hon'ble Member will require some more time.

Sri G. V. GOWDA.—Yes, Sir.

Mr. DEPUTY SPEAKER.—The House will now adjourn and meet again tomorrow at 1 P.M.

The House adjourned at Six of the Clock to meet again at One of the Clock on Thursday, the 13th September 1962.